ಬೆಂಗಳೂರು ನಗರದ ಒಂದು ಭವ್ಯ ಬಡಾವಣೆಯಲ್ಲಿ ಶ್ರೀರಾಮನವಮಿ ಸಂಗೀತೋತ್ಸವ ಏರ್ಪಟ್ಟಿದೆ. ಬೊಮ್ಮನ ಹಳ್ಳಿಯ ಕಿಂದರಿ ಜೋಗಿಯ ಮೋಹಕ ನಾದಕ್ಕೆ ಮರುಳಾದ ಇಲಿಯಂತೆ ಬೆಂಗಳೂರಿನ ರಸಿಕರು ವೇಣು ಮಾಂತ್ರಿಕ ಟಿ. ಆರ್. ಮಹಾಲಿಂಗಮ್ ಅವರ ಕೊಳಲಿನ ದೈವಿಕ ಮಾಧುರ್ಯದಿಂದ ಸಂಮೋಹಿತರಾಗಿದ್ದಾರೆ. ಆ ಭೂರಿ ಜನಜಂಗುಳಿಯಲ್ಲಿ ಎಲ್ಲೋ ಸುಮ್ಮನೆ ಕುಳಿತಿದ್ದಾನೆ ಆರರ ಹರೆಯದ ಅಣುಗ ಸುರೇಶ್. ಅಂಬಿಕಾತನಯದತ್ತರ ಮಾತಲ್ಲ

ಸುಳಿಗಳು ತಿರುಗತ್ತೇ ಹೊಳೆಯ್ಯಾಗ
ಸುಳಿಯೊಂದು ತೇಲತ್ತೇ ಹೊಳೆಯಾಗ

ತುಂಬಿಯೊಂದು ಹಾಡತ್ತೇ ಹೊಳೆಯ್ಯಾಗ
ತಾವರ್ಯೊಂದು ಬಾಯ್ಬಿಡತ್ತೇ ಹೊಳೆಯಾಗ

“ಕೊಳಲು ನನ್ನ ಮಾಧ್ಯಮ.” ಇದು ಅಣುಗನ ಅಚಲ ನಿರ್ಧಾರ. ಮಗನ ಅಸಾಧಾರಣ ಆಸಕ್ತಿ ಗಮನಿಸಿದ ತಂದೆ ಇವನನ್ನು ಎಂ.ಎಸ್.

~~[illegible]~~

(3)

ಪಿರಂತರೆ ಇವರ ಮೂಲಕ ನವಸ್ವನಗಳನ್ನು ಎರಡು ಧಾತುಗಳನ್ನು ಅಪ್ರಾಪರ್ ಕೈಬಯಲನ್ನು ಬತ್ತಲಿಸಿ ಕೊಳಲಿನ ಅಂತಸ್ಸತ್ವವನ್ನು ಎತ್ತಲಿಸಿದೆ. ಇವರ ಕೊಳಲಿನ ನಾದಮಾಧುರ್ಯಕ್ಕೆ ಮಾರುಹೋದ 'ಶಂಕರ್ ವಿಕ್ಕಿ' ಇವರನ್ನು a poet of the flute ಎಂದು ವರ್ಣಿಸಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ "ಮಹಾಲಿಂಗಮ್ ಕೈಬಯಲು ನಿಮ್ಮೆದೆ ಉತ್ತರಾಧಿಕಾರಿ ಯಾರು?" ಎಂಬ ಪ್ರಶ್ನೆಗೆ ದೊರೆಯುವ ಏಕೈಕ ಉತ್ತರ "ಮರಳಿ ಅಲ್ಲದೆ ಇನ್ನಾರು?"

ವೇಣುವಾದನಪಟು ಬಿ. ಎನ್. ಸುರೇಶ್

ಸಂದರ್ಶನ ಲೇಖನ

ಸಂದರ್ಶಕ: ಟಿ. ಟಿ. ನಾರಾಯಣರಾವ್

ಬೆಂಗಳೂರು ನಗರದ ಒಂದು ಭವ್ಯ ಬಡಾವಣೆಯಲ್ಲಿ ಶ್ರೀರಾಮನವಮಿ ಸಂಗೀತೋತ್ಸವ ನಡೆಯುತ್ತಿದೆ. ಬೊಮ್ಮನಹಳ್ಳಿಯ ಕಿಂದರಿ ಜೋಗಿಯ ಮೋಹಕ ನಾದಕ್ಕೆ ಮರುಳಾದ ಎಳೆಯರಂತೆ ನಗರದ ರಸಿಕರು ವೇಣುಮಾಂತ್ರಿಕ ಟಿ. ಆರ್. ಮಹಾಲಿಂಗಮ್‌ರವರ ಕೊಳಲಿನ ಧ್ವನಿಕ ಮಾಧುರ್ಯದಿಂದ ಸಂಮೋಹಿತರಾಗಿ ತಲೆದೂಗುತ್ತಿದ್ದಾರೆ. ಆ ಬಾರಿ ಜನಜಂಗುಳಿಯಲ್ಲಿ ಎಲ್ಲರೊಡನೆ ಸುಮ್ಮನೆ ಕುಳಿತಿದ್ದಾನೆ ಆರು ಹರೆಯದ ಸುರೇಶ್ (1946) ಎಂಬುವ ವಿಶಿಷ್ಟ ಶಿಶುವೇಕ. ಅಂಬೆಗಾಲಿಕ್ಕುವ ಮಾತಿನಲ್ಲಿ

ಹೀಗೆಲ್ಲ ತಿರುಗಿತ್ತು ಹೊಳ್ಳವಾಗ

ಒಪ್ಪುವ ಸಂಗೀತರಚನೆಗಳನ್ನು ನುಡಿಸುವ ಸಂಪ್ರದಾಯ ಬರಬೇಕು. ಹಲವು ನುಡಿಸುವಾಗ ಇವನ್ನು ನಿಯಮಿತವಾಗಿ ಮಾಡುತ್ತೇವೆ: ರಾಗವನ್ನು ತಾಳದ ಚೌಕಟ್ಟಿನಲ್ಲಿ ಸಾಹಿತ್ಯಾಧಾರವಿಲ್ಲದೆ ನುಡಿಸುವ ಕ್ರಮವಿದು. ಆದರೆ ಇದೇ ಕಟ್ಟಳೆಯನ್ನು ಹಾಗೆ ಸಂಗೀತರಚನೆಗಳಿಂದ ಆ — ಅಂದರೆ ಸಾಹಿತ್ಯರಹಿತ ರಚನೆಗಳಿಂದ, ಸಾಹಿತ್ಯಸಹಿತ ಕೃತಿಗಳಿಂದ ಅಲ್ಲ — ಕೇಳಲು ಕಾಲವಿನ್ನೂ ಪಕ್ವವಾಗಿಲ್ಲ. ನಮ್ಮ ರಸಿಕರಿಗೆ art appreciation courseನ್ನು ನೀಡಿ ಈ ವಿಚಾರಗಳನ್ನು ತಿಳಿಯಪಡಿಸಿ ಪ್ರಾಯೋಗಿಕವಾಗಿ ಮುಂದುವರಿಯಬೇಕು. ಇಲ್ಲವಾದರೆ ನಮ್ಮನ್ನು programmeಗೆ ಯಾರೂ ಕರೆಯುವುದಿಲ್ಲ, ನಮ್ಮ programmeಗೆ ಜನ ಬರುವುದೂ ಇಲ್ಲ!"

ಕಲಾವಿದನಿಗೆ ಸ್ಫೂರ್ತಿ

"ಸ್ಫೂರ್ತಿ ಇಲ್ಲದೆ ನುಡಿಸುವ ಕಲಾವಿದ ಚಿತ್ರಿಸುವುದು ಸಂಗೀತವನ್ನಲ್ಲ, ಅದರ ಕಳೇಬರವನ್ನು. ರಸಿಕರಿಂದ ಅಥವಾ ಪರಿಸರದಿಂದ ಅವನು ಸ್ಫೂರ್ತಿ ಪಡೆಯುತ್ತಾನೆ ಎನ್ನುವುದು ಒಂದು ಮಟ್ಟದವರೆಗೆ ನಿಜ — ಮೂಲತಃ ಅವನಲ್ಲಿ ಇಲ್ಲದ ಅದು ಉದ್ಭವಿಸಲು ಅವಕಾಶವಿದ್ದರೆ ಮಾತ್ರ. ಆಗ ಈ ಬಾಹ್ಯ ಸಂಗತಿಗಳು ಅವನಿಗೆ ಪ್ರೇರಕಗಳಾಗಬಲ್ಲವು, ಅಷ್ಟೆ. ಅಂತರಂಗ ಸ್ಫೂರ್ತಿಯನ್ನು ಉತ್ಪಾದಿಸಲು ಅವನು ಯಾವ ಹಾದಿ ಅನುಸರಿಸುತ್ತಾನೆ ಎನ್ನುವುದು ಅವನ ಖಾಸಗಿ ವಿಚಾರ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಈ ಹಾದಿಗಳು ಸಾಮಾನ್ಯ ಜನರ ದೃಷ್ಟಿಯಲ್ಲಿ ವಿಚಿತ್ರವಾಗಿರಬಹುದು, ನಿಷಿದ್ಧವಾಗಿರಬಹುದು ಅಥವಾ ಅಸಾಂಪ್ರದಾಯಿಕವಾಗಿರಬಹುದು. ಇವರು ನೋಡಬೇಕಾದದ್ದು ಅವನ ಕಲೆ ಹೊರಗೆಡಹುವ ಒಂದೊಂದು ಸಂಗತಿಯನ್ನು, ಅವನು ಹೇಗೆ ಬಾಳುತ್ತಾನೆ, ಅವನ ಅಭ್ಯಾಸಗಳೇನು ಎಂಬ ಅನ್ಯಸಂಗತಿಗಳನ್ನು ಅಲ್ಲ."

~~ಇಂತು~~

ಜಿ. ಟಿ. ನಾರಾಯಣರಾವ್
ಅತ್ರಿ
ಎಂಟನೆಯ ಅಡ್ಡರಸ್ತೆ
ಸರಸ್ವತೀಪುರ
ಮೈಸೂರು 570009
ದೂರವಾಣಿ 25759

ಬಿ. ಎಸ್. ಸುರೇಶ್
ಬಳಗಿರಿ
18(1) ಎಂಟನೆಯ ಮುಖ್ಯರಸ್ತೆ
ಮಲ್ಲೇಶ್ವರ
ಬೆಂಗಳೂರು 560003
ದೂರವಾಣಿ 60397

8 ಜನವರಿ 1985

ಬುಸು ಬುಸು ಎಂದು ಊದುವುದು. ಹೀಗಾಗಿ ಸಂಗೀತ ಸ್ವರಗಳ ಜೊತೆ ತನಪ್ಪನೆ ಎಷ್ಟೋ ಅಸಂಗತ ಶಬ್ದಗಳೂ ಬೆರೆತಿರುತ್ತಿದ್ದವು. ಬೆರಳುಗಳನ್ನು ರಂಧ್ರಗಳ ಮೇಲೆ ಸೂಕ್ಷ್ಮವಾಗಿ ಸರಿಸಿ ಅಲುಗಿಸಿ ಇಲ್ಲವೇ ತಟ್ಟಿ ಗಮಕಗಳಲ್ಲಿ ಹುಮ್ಮಸ್ಸನ್ನುಂಟುಮಾಡುವತ್ತ ಹುಟ್ಟಿನ ಗಮನವೇನೂ ಹರಿದಿರಲಿಲ್ಲ.

⊛ ಮಹಾಲಿಂಗಮ್ ಏನು ಸಾಧಿಸಿದರು!

ಇಂಥ ಗಾಳಿ ನಳದಲ್ಲಿ ಅವರೊಂದು ಹಿರಿಯ ಕ್ರಾಂತಿಯನ್ನೇ ಸಾಧಿಸಿದರು: ಊದುವಿಕೆ ತಂತ್ರ, ಬೆರಳಾಡಿಸಿಕೆ ತಂತ್ರ ಮತ್ತು ತುತ್ತುಕಾರ ತಂತ್ರ ಈ ಮೂರನ್ನು ಕೊಳಲು ವಾದನಕ್ಕೆ ಅಳವಡಿಸಿ ನವಸಾಧ್ಯತೆಗಳ ವಿಸ್ತಾರ ಪ್ರದೇಶವನ್ನೇ ರಸಿಕರೆದುರು ತೆರೆದಿಟ್ಟರು.

⊛ ಏನು ಹಾಗೆಂದರೆ?

~~ಊದುವಿಕೆ ತಂತ್ರ: ದಪ್ಪ ತುಟಿ ಮತ್ತು ಅಳತೆ ವ್ಯಾಪ್ತಿಯುಳ್ಳ ಬಿದಿರು~~

ಊದುವಿಕೆ ತಂತ್ರ: ದಪ್ಪ ತುಟಿಯು ಮತ್ತು ದೊಡ್ಡ ನಾಳ ವ್ಯಾಸದ ~~ಅಳತೆ ಇರುವ~~ ಬಿದಿರು ಬೊಂಬಿನಿಂದ ಕೊಳಲು ರಚಿಸಬೇಕು. ಇದನ್ನು ಉಸಿರು ಬಿಗಿಹಿಡಿದು ಸಂಪೂರ್ಣ ನಿಹಿತವಾಗಿ ಫೂ ಫೂ ಎಂದು ಊದಬೇಕು. ಆಗ ಕೊಳಲಿನ ಒಳಗಿನ ವಾಯು ಕಂಪಿಸಿ ತೂಗತ್ತೆ. ಅನುರಣಿಸಿ ಗಾಢ ಭಾವಪೂರಿತ ಮಧುರನಾದ ಗಾತ್ರನಿಹಿತವಾಗಿ ಹೊಮ್ಮುತ್ತದೆ. ಉಸಿರಿನ ಹಿಡಿತದಿಂದ ಈ ನಾದದ ಸ್ಥಾಯಿಯನ್ನು, ಸಂಚಾರವನ್ನು ಸರಾಗವಾಗಿಯೂ ನಿಯಂತ್ರಿಸಬಹುದು. ಮಂದ್ರದಲ್ಲಿ ಇದು ಬಲಿಷ್ಠ ಮತ್ತು ಗಂಭೀರ, ತಾರದಲ್ಲಿ ಸುಕುಮಾರ ಮತ್ತು ಮಧುರ

(8) (5)

ಬುಸು ಬುಸು ಎಂದು ಊದುವುದು. ಹಾಗಾಗಿ ಸಂಗೀತ ಸ್ವರಗಳ ಜೊತೆ ತನ್ನದೇ ಎನ್ನುವ ಅಸಂಗತ ಸದ್ದುಗಳು ಬೆರೆತಿರುತ್ತಿದ್ದುವು. ಬೆರಳುಗಳನ್ನು ರಂಧ್ರಗಳ ಮೇಲೆ ಸೂಕ್ಷ್ಮವಾಗಿ ಸರಿಸಿ ಅದುಮಿ ಇಲ್ಲವೇ ತಟ್ಟಿ ಗಮಕಗಳಲ್ಲಿ ಕುಸುರಿ ಕೆಲಸವೆಸಗುವತ್ತ ಕೊಳಲಿನ ಗಮನವೇನೂ ಹರಿದಿರಲಿಲ್ಲ.

* ಮಹಾಲಿಂಗಮ್ ಏನು ಸಾಧಿಸಿದರು?

ಇಂಥ ಗಾಢ ನೆಲೆಯಲ್ಲಿ ಅವರೊಂದು ಹೊಸ ಕ್ರಾಂತಿಯನ್ನೇ ಸಾಧಿಸಿದರು: ಊದುವಿಕೆ ತಂತ್ರ, ಬೆರಳಾಡಿಸಿಕೆ ತಂತ್ರ ಮತ್ತು ತುತ್ತುಕಾರ ತಂತ್ರ ಈ ಮೂರನ್ನೂ ಕೊಳಲು ನುಡಿಸಿಕೆಗೆ ಅಳವಡಿಸಿ ನವಸಾಧ್ಯತೆಗಳ ವಿಶಾಲ ಹರವನ್ನೇ ರಸಿಕರೆದುರು ತೆರೆದಿಟ್ಟರು.

ವಿಶಾಲ ಅರ್ಥವಿಲ್ಲದ ಅಂದರೆ ಪರಿಷ್ಕೃತಿಯ

* ಏನು ಹಾಗೆಂದರೆ?

ಊದುವಿಕೆ ತಂತ್ರ: ದಪ್ಪ ತೊಗಟೆಯ ದೊಡ್ಡ ನಾಳವ್ಯಾಸದ ಬಲಿತ ಬಿದಿರಿನಿಂದ ಕೊಳಲನ್ನು ರಚಿಸಬೇಕು. ~~ಇದನ್ನು~~ ಉಸಿರು ಬಿಗಿಹಿಡಿದು ಸಂಯಮಪೂರ್ವಕವಾಗಿ ಫ್ಫೂ ಫ್ಫೂ ಎಂದು ಇದನ್ನು ಊದಬೇಕು. ಆಗ ಕೊಳಲಿನ ಒಳಗಿನ ವಾಯು ಕಂಪಿಸಿ ತೊಗಟೆ ಅನುರಣಿಸಿ ಗಾಢ ಭಾವಪೂರಿತ ಮಧುರನಾದ ಗತ್ಯಂತರ ಹೊಮ್ಮುತ್ತದೆ. ಉಸಿರಿನ ಹಿಡಿತದಿಂದ ಈ ನಾದದ ಸ್ಥಾಯಿಯನ್ನು ಸಂಚಾರವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು. ಇದು ಮಂದ್ರದಲ್ಲಿ ಬಲಿಷ್ಠ ಮತ್ತು ಗಂಭೀರ, ತಾರದಲ್ಲಿ ಸುಕುಮಾರ ಮತ್ತು ಅತಿಮಧುರ. ಇಂಥ ಕೊಳಲಿನಲ್ಲಿ ಮಾತ್ರ ಈ ಮಾಧ್ಯಮದ ಸರ್ವಸಾಧ್ಯತೆಗಳನ್ನು ಬಿತ್ತರಿಸುವುದು ಸಾಧ್ಯ.

ಬೆರಳಾಡಿಸಿಕೆ ತಂತ್ರ: ಕರ್ನಾಟಕ ಸಂಗೀತದ ಜೀವವಿರುವುದು ಗಮಕಗಳಲ್ಲಿ. ಎಂದೇ ಇದನ್ನು ಗಮಕಾಧಾರಿತ ನಾದಪ್ರಕಾರ ಎನ್ನುವುದುಂಟು. ಉದಾಹರಣೆಗೆ 'ಓಡಿ ಬಾರಯ್ಯ ವೈಕುಂಠಪತಿ' ಎನ್ನುವ ಭೈರವಿ ರಾಗದ ಕೃತಿಯನ್ನು ನುಡಿಸುವಾಗ 'ಓ', 'ಬಾ' ಮುಂತಾದ ಜೀವಸ್ಥಾನಗಳಲ್ಲಿ ಗಮಕಗಳನ್ನು ಸಮೃದ್ಧವಾಗಿ ತೂಗಿಸಿದಾಗ ಮಾತ್ರ ಸಾಹಿತ್ಯಾಂತರ್ಗತ ಭಾವ ಚೆನ್ನಾಗಿ ಮಿಡಿಯುತ್ತದೆ. ಕೊಳಲಿನ ರಂಧ್ರಗಳ ಮೇಲೆ ಬೆರಳುಗಳನ್ನು ವಿಶಿಷ್ಟ ಕ್ರಮದಲ್ಲಿ ಚಲಿಸುವುದರ ಮೂಲಕ ಇದನ್ನು ಸಾಧಿಸಬೇಕು. ಬೆರಳಿನ ಒತ್ತಡದಲ್ಲಿ ಆಗುವ ಕಂಪನವನ್ನು ವ್ಯತ್ಯಾಸವು ನಾದದ ಗತಿಯನ್ನೇ ಬದಲಾಯಿಸಬಲ್ಲವು.

ತುತ್ತುಕಾರ ತಂತ್ರ: ಕೃತಿಯ ಸಾಹಿತ್ಯವನ್ನು ಎತ್ತಿ ತೋರಿಸಲು ಉಸಿರು ಊದುವಾಗ ಅನುಸರಿಸುವ ವಿಶಿಷ್ಟ ಕ್ರಮವಿದು. ಸಾಹಿತ್ಯದ ಒತ್ತು ಬರಬೇಕಾದಲ್ಲೆಲ್ಲ ವಾದಕ ಇದನ್ನು ಪ್ರಯೋಗಿಸುತ್ತಾನೆ. ಮಹಾಲಿಂಗಮ್ ಈ ಮೂರೂ ತಂತ್ರಗಳನ್ನು ತಮ್ಮ ಶೈಲಿಯಲ್ಲಿ ಸಮೃದ್ಧವಾಗಿ ಅಳವಡಿಸಿಕೊಂಡು ವೇಣುವಾದನವನ್ನು ಹಾಡುಗಾರಿಕೆಯ ಹಿರಿಮೆಗೆ ಎತ್ತರಿಸಿದರು.

* ನಿಮ್ಮ ವಿವರಣೆ ಸರಿ. ಏಕೆಂದರೆ ಮಹಾಲಿಂಗಮ್ ಬರುವುದಕ್ಕಿಂತ ಮೊದಲು ಅತ್ಯಂತ ಜನಪ್ರಿಯರಾಗಿದ್ದ ಪಲ್ಲಡಮ್ ಸಂಜೀವರಾಯರು ಹಾಗೂ ಇವರ ಸಮಕಾಲೀನರ ಶೈಲಿ ~~ನನಗೆ ಕೇಳಿ ಗೊತ್ತು~~ ಕೇಳಿ ನನಗೆ ಗೊತ್ತು. ಹಾಗಲ್ಲ, ಇಂದಿನ ದಿನಗಳಲ್ಲಿ ಮಹಾಲಿಂಗಮ್ ಅವರ ~~[illegible]~~ ಶಿಷ್ಯರಾದವರು ಹೇಗೆ ನುಡಿಸುತ್ತಾರೆ? ಅವರ ಶೈಲಿಯ ~~[illegible]~~ ದುರ್ಬಲ ಅಂಶವಾದ ವಿಚ್ಛಿನ್ನತೆಗಳನ್ನು (breaks) ~~[illegible]~~ ಚೆನ್ನಾಗಿ ಅನುಕರಿಸುತ್ತಾರೆ! ~~[illegible]~~ ಆ ಮಾಧುರ್ಯದ ತುಣುಕು ಕೂಡ ಇವರಿಗೆ ಸಿದ್ಧಿಸಿಲ್ಲ — ಎಳೆಗಳ ಗೋಜಲಿನಲ್ಲಿ ಕಸೂತಿಯ ಸೌಂದರ್ಯವನ್ನು

64 ಕಾರಣವನ್ನ ನೋಡಿ!

~~ಮಹಾನತೆಯಂಥವನ್ನ ಪಾಡು~~! ಇದು ಹಾಗಿರಲಿ. ಮಹಾಲಿಂಗಮ್ ಅವರ ಕೃತಿ ಯನ್ನು ನಾವು ಮೆಚ್ಚುವುದು ಮತ್ತು ಮೆಚ್ಚಿ ಹುಚ್ಚಾಗುವುದು ಎರಡು ಕಾರಣಗಳಿಗಾಗಿ: ಅದರಲ್ಲಿ ಅಂತರ್ಗತವಾಗಿರುವ ಒಂದು ತೆರನಾದ ದೈವಿಕ ಉನ್ಮಾದ ಕ್ಕಾಗಿ; ಅದರ ಮಾಧುರ್ಯ, ಗಾತ್ರ ಮತ್ತು ವಿಸ್ತಾರಕ್ಕಾಗಿ. ಈಗ, ನಮ್ಮ ಕೃತಿಯಲ್ಲಿ ಎರಡನೆಯದು ತದ್ವತ್ತಾಗಿ ಮೈದಳೆದಿದೆ ಮಾತ್ರವಲ್ಲ, ಅದರಲ್ಲೊಂದು ವ್ಯತ್ಯಾಸವೂ ಇದೆ: ಅವರದು ಲಯಪ್ರಧಾನ ರಾಗವಿಸ್ತಾರ, ನಮ್ಮದು ರಾಗಪ್ರಧಾನ ಲಯವಿಸ್ತಾರ. ಅವರದು ಬುದ್ಧಿಗೆ ಪ್ರೇರಣೆ, ನಮ್ಮದು ಭಾವಕ್ಕೆ ಅರ್ಪಣೆ. ಈ ಕಾರಣದಿಂದ ನಮ್ಮ ವಾದನ ನಮಗೆ ಅಧಿಕ ಪ್ರಿಯವಾಗುತ್ತದೆ. ಅವರ ಹೆಗಲ ಮೇಲೆ ನಾವು ನಿಲ್ಲದೇ ಇರುತ್ತಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲವೋ ಏನೋ!

ನನ್ನ ಅತ್ಯಂತ ತರುಣಾವಸ್ಥೆಯ ವಯಸ್ಸಿನಲ್ಲಿ ನಾನು ಅವರಿಂದ ಬಹಳಷ್ಟು ಪ್ರಭಾವಿತನಾಗಿದ್ದೇನೆ. ಆ ಶೈಲಿಯ impact ಅಷ್ಟು powerful – ಮುಂಗಾರಿನ ಗುಡುಗಿನಂತೆಯೇ ಆಗಿ. ಶಿವರಾಮಯ್ಯ ನನ್ನನ್ನು ಮಹಾಲಿಂಗಮ್ techniqueಗಳಿಗೆ ಪ್ರವೇಶಗೊಳಿಸಿದರು. ಬೆಂಗಳೂರಿನ ಕೆ. ವೆಂಕಟರಾಮ್ ಕಚೇರಿ ತಂತ್ರಗಳ ಬಗ್ಗೆ ಸಮರ್ಥ ಮಾರ್ಗದರ್ಶನವಿತ್ತರು. ಅದೇ ವೇಳೆ ನಾನು ಆಲತ್ತೂರ್ ಸಹೋದರರ ಗಾಯನಕ್ಕೆ ಮಾರುಹೋಗಿದ್ದೆ — ಅದರ ಭವ್ಯತೆಗಾಗಿ fullnessಗಾಗಿ.

⊗ ಅಂದ ಮೇಲೆ ನಿಮ್ಮ ಶೈಲಿ ಮಹಾಲಿಂಗಮ್ ತಂತ್ರ ಮತ್ತು ಆಲತ್ತೂರ್ ಭವ್ಯತೆ ಇವುಗಳ ಮಧುರ ಸಂಯುಕ್ತ?

ಆ ದಿಶೆಯಲ್ಲಿ ಮುನ್ನಡೆಯಲು ಪ್ರಯತ್ನಿಸುತ್ತಿದ್ದೇನೆ ಎನ್ನಬಹುದು.

⊗ ಮಹಾಲಿಂಗಮ್ ಅವರ ದೈವಿಕ ಉನ್ಮಾದವಾಗಲಿ ದಿವ್ಯ ನಿರ್ಲಕ್ಷ್ಯವಾಗಲಿ ನಿಮ್ಮ ಶೈಲಿಯಲ್ಲಿಲ್ಲ. ಬದಲು ಶಿಸ್ತು ಒಪ್ಪ ಓರಣ ಇವೆ. ಅಂದರೆ ಕಚೇರಿಗೆ ನೀವು ರಾಗ ಕೃತಿ ತಾಳ ಆಯುವಲ್ಲಿ ಖಚಿತ ಯೋಜನೆ ಕಂಡುಬರುತ್ತದೆ. ಕೃತಿಯ ಪೂರ್ಣ ಪಾಠವನ್ನು ನೀವು ~~ವಾದ್ಯಕ್ಕೆ ಹೊಂದಿಸಿ~~ (ವಾದ್ಯಕ್ಕೆ ಸಂಸ್ಕರಿಸಿದ) ಯಂತೆಯೇ ಬಡಿಸಿ ಬಡಿಸಿ ನುಡಿಸುತ್ತೀರಿ, ಕೇವಲ ರಾಗದ ಧಾಟಿಯನ್ನು ತಾಳದ ಚೌಕಟ್ಟಿನಲ್ಲಿ ಅಳವಡಿಸಿ ತೃಪ್ತರಾಗುವುದಿಲ್ಲ. ಆದರೆ ಈ ಎಲ್ಲ ಕಾರಣಗಳಿಂದ ನಿಮ್ಮ ಶೈಲಿ ತುಸು ಭಾರ ಅಥವಾ ಯಾಂತ್ರಿಕ ಎನ್ನಿಸ ಲಾರದೇ? ಎಲ್ಲಿ ವ್ಯಕ್ತಿ ಬಂಧಮುಕ್ತನಾಗಿರುವನೋ ಅಲ್ಲಿ ಸೃಜನಶೀಲತೆ ಮೆರೆಯು ತ್ತದೆ, ಎಲ್ಲಿ ಬಂಧಬದ್ಧನಾಗಿರುವನೋ ಅಲ್ಲಿ ಮಸುಕಾಗುತ್ತದೆ.

ಸಭಾವಿಧ ಕಚೇರಿ ಸಂಗೀತ ನುಡಿಸಲು ಒಪ್ಪಿಕೊಂಡಾಗಲೇ ಒಂದು ~~ತೆರನಾದ~~ (ರೀತಿಯಲ್ಲಿ) ಬಂಧಬದ್ಧನಾಗುತ್ತಾನೆ: ಸ್ವಗತ ಸಂಪ್ರದಾಯ, ರಸಿಕರ ಅಪೇಕ್ಷೆ ಮುಂತಾದವು ಗಳಿಂದ. ಈ ಅನಿವಾರ್ಯ ಪರಿಮಿತಿಗಳ ಒಳಗೂ ಆತ ಹೇಗೆ ತನ್ನ ಛಾಪು ಒತ್ತು ತ್ತಾನೆ ಎನ್ನುವುದೇ ಆತನ ಯೋಗ್ಯತೆಯ ಮಾನದಂಡ.

⊗ ಹಾಗಾದರೆ ಮಹಾಲಿಂಗಮ್ ಪರಂಪರೆಯಲ್ಲಿ ನಿಮ್ಮ ಸಾಧನೆ ಏನು!

ರಾಗಾಲಾಪನೆಯಲ್ಲಿ ವೈವಿಧ್ಯ ಮತ್ತು ಕೃತಿವಿಸ್ತಾರದಲ್ಲಿ ಅಧಿಕ ಗಮಕಗಳು; ಕೃತಿಯ ಪೂರ್ಣಪಾಠವನ್ನು ನುಡಿಸುವುದು – ರಸಿಕರು ಅದನ್ನು ಅಕ್ಷರಶಃ ಭಾವಶಃ ಅನುಭವಿಸುವಂತೆ; ಪ್ರಚಾರದಲ್ಲಿಲ್ಲದ ದಾಸಕೃತಿಗಳಿಗೆ ರಾಗಸಂಯೋಜ ನೆಯಿತ್ತು ಹೊಸ ಧಾಟಿಯನ್ನು ರೂಪಿಸುವುದು, ಇತ್ಯಾದಿ. ಕರ್ನಾಟಕ ಸಂಗೀತ ಪದ್ಧತಿ ಯಲ್ಲಿರುವಷ್ಟು ಪರಿಷ್ಕಾರ ಮತ್ತು ಸಂಕೀರ್ಣ ತಾಳವೈವಿಧ್ಯ ಬೇರಾವುದರ ಲ್ಲಿಯೂ ಇಲ್ಲ. ಇದರ ಸಾಧ್ಯತೆಗಳನ್ನು ಗಮನಿಸಿ ಸ್ವರಪ್ರಸ್ತಾರದಲ್ಲಿ ನೂತ ನ ಗಣಿತಗಾನಗಳನ್ನು ತಂದು ಇದಕ್ಕೆ ರಾಗಕ್ಕೆ ಒಂದು ಮೆರುಗನ್ನು

ಸಾಹಿತ್ಯ ಕಲಾವಿದ: ನನ್ನ ಅಭಿಪ್ರಾಯದಲ್ಲಿ ನಿಜವಾದ ಕಲಾವಿದ ಎಂದೂ ಸಾಮಾನ್ಯ ಮಾನವನಂತಿರಲು ಸಾಧ್ಯವಿಲ್ಲ. ಅವನ ಅಂತರಂಗ ವಿಶ್ವಗಾನದೊಡನೆ ಸದಾ ಶ್ರುತಿಯಲ್ಲಿರುತ್ತದೆ, ಗತಿ ವಿಶ್ವಗತಿಯೊಡನೆ ಸಮಲಯದಲ್ಲಿರುತ್ತದೆ. ಅವನು ಸದಾ ಅಭ್ಯಾಸ ಚಿಂತನೆ ಅಧ್ಯಯನ ಮುಂತಾದ ಚಟುವಟಿಕೆಗಳಲ್ಲಿ ಮಗ್ನನಾಗಿದ್ದು ಸ್ವಕೃತಿಯ ಚೆಲುವಿಗಾಗಿ ಹಾತೊರೆಯುತ್ತಿರುತ್ತಾನೆ. ಅರ್ಥಗರ್ಭಿತ ಜನ ಅವನನ್ನು ಅರ್ಥಮಾಡಿಕೊಳ್ಳಬೇಕು. ಇಲ್ಲವಾದರೆ ಅವರು ಹತಾಶರಾಗುವುದು ಖಚಿತ. ಏಕೆಂದರೆ ಜನರ ಇಚ್ಛಾನುಸಾರ ಕಲಾವಿದ ವರ್ತಿಸಲಾರ. ಅವನಿಗೆ ಕಲಾಸೃಷ್ಟಿಯೊಂದೇ ಪರಮಗಮ್ಯ, ಉಳಿದ್ದೆಲ್ಲವೂ ಗೌಣ ಇಲ್ಲವೇ ಅನುಷಂಗಿಕ.

⊛ ಕಿರಿಯ ಕಲಾವಿದರಿಗೆ ನಿಮ್ಮ ಸಂದೇಶವೇನು?

ಅವರಿಗೆ ಒಪ್ಪುವ ಮಾಧ್ಯಮ ಆಯ್ದುಕೊಂಡು ಅದೇ ಮಾಧ್ಯಮದಲ್ಲಿ ಶಿಕ್ಷಣ ಕೊಡುವ ಸಮರ್ಥ ಗುರುವಿನ ಜೊತೆ ಶ್ರದ್ಧೆಯಿಂದ ಎಡೆಬಿಡದೆ ಅಧ್ಯಯನ ಕೈಗೊಳ್ಳಬೇಕು. ಆರಂಭದ ಪಾಠ ಅತಿಮುಖ್ಯ. ಹಾಗಾದ ಹಂತ ತಲುಪಿದ ಬಳಿಕ ಹಿರಿಯ ವಿದ್ವಾಂಸರಿಂದ ಪಾಠ ಹೇಳಿಸಿಕೊಳ್ಳುವುದು ಅಪೇಕ್ಷಣೀಯ. ಒಂದು ಎಚ್ಚರಿಕೆ: ಕೊಳಲು ಕಲಿಯಬೇಕೆನ್ನುವವರು ವೇಣುವಾದಕರಿಂದಲೇ — ಗಾಯಕರಿಂದಾಗಲಿ ಪಿಟೀಲುಗಾರರಿಂದ ಇಲ್ಲವೇ ವೈಣಿಕರಿಂದ ಅಲ್ಲ — ಶಿಕ್ಷಣಪಡೆಯಬೇಕು. ಒಳ್ಳೆಯ ಸಂಗೀತ ಕೇಳಿ ಕಲ್ಪನಾಸಾಮರ್ಥ್ಯವನ್ನು ಸದಭಿರುಚಿಯನ್ನು ವೃದ್ಧಿಸಿಕೊಳ್ಳಬೇಕು. ಆರಂಭದಲ್ಲಿ ಗುರುವನ್ನೂ ಇತರರನ್ನೂ ಅನುಕರಿಸುವುದು ಅನಿವಾರ್ಯ. ಆದರೆ ರೆಕ್ಕೆ ಬಲಿತಂತೆ ಸ್ವಂತ ಶೈಲಿ ರೂಪಿಸಿಕೊಂಡು ವಿಸ್ತಾರಾಕಾಶದಲ್ಲಿ ಹಾರಬೇಕು. ಯಾರದೇ carbon copy ಆಗುವ ಕಲಾವಿದ — ಮೂಲ ಕಲಾವಿದ ಎಂಥ ಪ್ರತಿಭಾಶಾಲಿಯೇ ಆಗಿದ್ದರೂ — ಎಂದಿಗೂ ಬೆಳೆಯಲಾರ. ಕರ್ನಾಟಕ ಸಂಗೀತದಲ್ಲಿ ಕಲಾವಿದನ ಅಭಿವ್ಯಕ್ತಿಗೆ ಅಮಿತ ಅವಕಾಶಗಳಿವೆ. ಇವನ್ನು ಗಮನಿಸಿ ಕಲಾವಿದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು.

ಬಾನ್ಸುರಿ ಮತ್ತು ಕೊಳಲು

“ಹಿಂದೂಸ್ತಾನಿ ಸಂಗೀತದಲ್ಲಿ ನುಡಿಸುವ ಬಾನ್ಸುರಿ, ನಮ್ಮ ಕೊಳಲಿಗೆ ಹೋಲಿಸುವಾಗ, ಇನ್ನೂ ವಿಕಾಸದ ಆರಂಭ ಹಂತದಲ್ಲಿದೆ. ಅದರ ಶ್ರುತಿ ಮಂದ್ರ ವಾದನತಂತ್ರ ತೀರ ಸಾಧಾರಣ. ಬಾನ್ಸುರಿವಾದ ಹಿತಕರವಾಗಿದ್ದರೂ ಏಕತಾನತೆಯ ದೃಷ್ಟಿಯಿಂದ ಪರಿಣಾಮಕಾರಿ ಅಲ್ಲ. ಅಲ್ಲದೆ ಮೃದಂಗವೂ ಅವತರಿಸಿದ ಹೊಸತು ಸಂಸ್ಕೃತಿ ಸುಧಾರಿಸದು. ಕರ್ನಾಟಕ ಸಂಗೀತದ ಮೃದಂಗವು ತಂತ್ರಗಳನ್ನು ಅಳವಡಿಸಿ ಹಿಂದೂಸ್ತಾನಿ ಸಂಗೀತವನ್ನು ನಮ್ಮ ಕೊಳಲಲ್ಲಿ ನುಡಿಸಲು ನಾನೀಗ ಅಭ್ಯಾಸ ಮಾಡುತ್ತಿದ್ದೇನೆ. ಇನ್ನು ಎರಡು ವಿಧಾನಗಳನ್ನು ಕಲೆಹಾಕುವುದು ಸಾಧ್ಯವಾದೀತು.”

ಕೊಳಲಿಗೆಂಥ ರಚನೆ ಬೇಕು!

“ನಮ್ಮ ಎಲ್ಲ ವಾದ್ಯಗಳೂ ದೇವರನ್ನು ಕುರಿತ, ಅಲ್ಲದೂ ಭಕ್ತಿಪ್ರಧಾನವಾದ, ಕೃತಿಗಳನ್ನು ನುಡಿಸುವುದು ಇಂದಿನ ಸಂಪ್ರದಾಯ. ಆದ್ದರಿಂದ ಪ್ರತಿಯೊಂದು ವಾದ್ಯಸಂಗೀತವೂ ಅದರದರ ಧರ್ಮಾನುಸಾರ ಮಾನುಷಕಂಠಸಂಗೀತದ (~~Vocal music~~) ಅಪೂರ್ಣ ಅನುಕರಣೆ. ಇದು ಹೊರತು ಆಯಾ ವಾದ್ಯಕ್ಕೆ

ಚಿತ್ರವೀಣೆ ಮೃದಂಗಮ್. ಈ ನೆಲೆಯಲ್ಲಿ ನಾನು ನಾದವನ್ನು ಪ್ರಯೋಗಮಾಡುತ್ತಿದ್ದೇನೆ. ಒಟ್ಟಾರೆ ಹೇಳುವುದಾದರೆ ಅವರು ಒದಗಿಸಿದ ತಳಹದಿಯ ಮೇಲೆ ನನ್ನ ಮನೋಧರ್ಮಾನುಸಾರ ಕಟ್ಟಡ ಕಟ್ಟುತ್ತಿದ್ದೇನೆ.

⊛ ನೀವು ಕೃತಿ ನುಡಿಸುವಾಗ ನಿಮ್ಮ ಮಾನಸಿಕ ಸ್ಥಿತಿ ಹೇಗಿರುವುದು? ರಾಗದ ಸ್ವರಸಂಚಾರ ಮತ್ತು ಕೃತಿಯ ತಾಳನಿಯಂತ್ರಣದತ್ತ ಲಕ್ಷ್ಯವೇ? ಪಕ್ಕವಾದ್ಯಗಳವರ ಕಡೆಗೆ ಗಮನವೇ? ರಸಿಕರ ಮೇಲೆ ದೃಷ್ಟಿಯೋ? ಸಾಹಿತ್ಯದಲ್ಲಿ ಕೇಂದ್ರೀಕರಣವೇ? ಸಾಹಿತ್ಯಾಂತರ್ಗತ ಭಾವದಲ್ಲಿ ಸ್ಥಾಯಿಯೋ? ಸಾಹಿತ್ಯಾತೀತ ಚಿರಂತನ ಸತ್ಯದಲ್ಲಿ ಲೀನವೇ?

ಸಂಗೀತ ಕಲಾವಿದ ಪೂರ್ವಸಿದ್ಧತೆ ಸಹಿತ ವೇದಿಕೆ ಏರುತ್ತಾನೆ. ಇವನಿಗೆ ಸ್ವರಸಂಚಾರ, ತಾಳನಿಯಂತ್ರಣ ಮತ್ತು ಲಯದ ಹದ ಅಪ್ರಯತ್ನಿತವಾಗಿ ಸಿದ್ಧಿಸಿರುತ್ತವೆ.

⊛ ನುರಿತ ವಾಹನಚಾಲಕನ ಕೈಚಳಕದಂತೆ! ಲಯ-ತಾಳ ವ್ಯತ್ಯಾಸವೇನು!

ಭಾವದ ವಿವಿಧ ಘಟಕಗಳಾಗಿ ಆಲಾಪನೆಯ ಆಕಾರಗಳು, ಕೃತಿಯ ಪದಗುಚ್ಛಗಳು ಮತ್ತು ಕಲ್ಪನಸ್ವರಮಾಲೆಗಳು ಪ್ರಕಟವಾಗುತ್ತವೆ. ಇಂಥ ಒಂದೊಂದು ಘಟಕದ ಅಭಿವ್ಯಕ್ತಿಗೆ ಸಾಗುವ ಕಾಲಪ್ರಮಾಣವೇ ಲಯ. ಕೃತಿಯ ವಿಸ್ತರಣೆ ತಾಳದ ಚೌಕಟ್ಟಿನ ಒಳಗೆ ನಿಗದಿತವಾಗಿ ನಡೆಯುತ್ತದೆ. ಆದಿತಾಳ, ರೂಪಕತಾಳ ಮುಂತಾದವು ಈ ನಡೆಯ ಲಕ್ಷಣಸೂಚಕಗಳು. ಇನ್ನು ಪಕ್ಕವಾದ್ಯಗಳು. ಇವು ಪಕ್ವವಾಗಿದ್ದು ಹದವರಿತು ಹಿಮ್ಮೇಳದ ಪಾತ್ರ ನಿರ್ವಹಿಸಿದರೆ ಸೊಗಸು. ಇಲ್ಲವಾದರೆ ನಮ್ಮ ಲಹರಿ (mood) ಕೆಟ್ಟುಹೋಗಿ ಕಚೇರಿ ಹಾಳಾಗುತ್ತದೆ. ಪ್ರಪಂಚದಲ್ಲೇ ಅತ್ಯಂತ ಶ್ರೇಷ್ಠ ವಾದ್ಯ ಭಾರತೀಯ ಕೊಳಲು. ಬಿದಿರ ಅಂಡಿಗೆ ತೂತು ಕೊರೆದು ಗಾಳಿಯ ಬೆರಳು ಆಡಿಸಿ ಇಂಗಡಲನ್ನೇ ಹರಿಸುವ ಪರಿ ಇದು. ಸಾಹಿತ್ಯೋಚ್ಚಾರಣೆ ಹೊರತಾಗಿ ಹಾಡುಗಾರಿಕೆಯ ಎಲ್ಲ ಗತ್ತು ಗೈರತ್ತುಗಳನ್ನು ಇದರಲ್ಲಿ ಲೀಲಾಜಾಲವಾಗಿ ಪುನರುತ್ಪಾದಿಸಬಹುದು. ಆದರೆ ಇದ್ದರ ಎಲ್ಲ ವಯಸು ಬಳುಕುಗಳನ್ನು ಮಾನವ ಶಾರೀರ ಸೃಷ್ಟಿಸಲಾರದು. ಇಂಥ ಬಲಿಷ್ಠ ವಾದ್ಯವನ್ನು ತನ್ಮಯತೆಯಿಂದ ನುಡಿಸುತ್ತಿರುವಾಗ ನಾನೊಂದು ಬ್ರಹ್ಮಾನಂದಸ್ಥಿತಿ ಏರುತ್ತೇನೆ. ಆಗ ಪ್ರಪಂಚ ವ್ಯಾಪಾರಗಳು ಯಾವುವೂ ನಮ್ಮ ಅರಿವಿಗೆ ಬರುವುದಿಲ್ಲ. ಸುನಾದಾಭಿಸಾರವೊಂದೇ ನಮ್ಮ ಧ್ಯೇಯ.

⊛ ಅರ್ಜುನನಿಗೆ ಭಾಸಪಕ್ಷಿಯ ಕಣ್ಣು ಮಾತ್ರ ಕಂಡಂತೆ!

ಹೌದು. ಇನ್ನು ಸಾಹಿತ್ಯ. ಇವನ್ನು ರಾಗ-ತಾಳಗಳ ಚೌಕಟ್ಟಿನಲ್ಲಿ ನುಡಿಸಲು ಅಭ್ಯಾಸಮಾಡುತ್ತೇವೆ. ನಮ್ಮ ಎಲ್ಲ ಕೃತಿಗಳೂ ಭಕ್ತಿಪ್ರಧಾನವಾದವು. ಅಲ್ಲದೇ ವಾದ್ಯಗಳಲ್ಲಿ ಅಕ್ಷರೋಚ್ಚಾರಣೆ ಅಸಾಧ್ಯ. ಹೀಗಾಗಿ ವಾದ್ಯಕಲಾವಿದನಿಗೆ ಸಾಹಿತ್ಯದ ಅರ್ಥ ತಿಳಿದಿರಬೇಕಾದದ್ದು ಅಷ್ಟೇನೂ ಮುಖ್ಯ ವಿಷಯವಲ್ಲ. ಗಾಯಕನಿಗೆ ಇದು ಅನಿವಾರ್ಯ. ಸಾಹಿತ್ಯದ ನಡೆಗೆ ಅನುಗುಣವಾಗಿ ಕೊಳಲಿನಲ್ಲಿ ಉತ್ತರ ಕೊಡುತ್ತ ಸೂಕ್ಷ್ಮವಾದ ಉಬ್ಬುವಿಕೆಯ ಮಾರ್ಮಿಕ ಭಕ್ತಿಯನ್ನು ಹರಿಸುತ್ತ ಬೆರಳುಗಳ ಸ್ಪರ್ಶದಿಂದ ಭಾವವನ್ನು ಬಿತ್ತರಿಸುತ್ತೇನೆ.

⊛ ನೀವು ಮೂರು ವ್ಯಕ್ತಿತ್ವಗಳ ಸಂಯೋಜನ: ಕಲಾವಿದ, ಸಾಮಾನ್ಯ ಮಾನವ, ವೃತ್ತಿ ಎಂಜಿನಿಯರ್. ಈ ಪಾತ್ರಗಳನ್ನು ಹೇಗೆ ನಿರ್ವಹಿಸುತ್ತೀರಿ?

ನಾನು ವೃತ್ತಿ ಎಂಜಿನಿಯರ್ ಅಲ್ಲ, ಎಂಜಿನಿಯರಿಂಗ್ ಪದವೀಧರ ಮಾತ್ರ. ಬಿಇಬಿಯಲ್ಲಿ ಸೇವೆ. ಈ ಸಂಸ್ಥೆ ನನ್ನನ್ನು ಆತ್ಮೀಯತೆಯಿಂದ ನೋಡಿಕೊಂಡು ನನ್ನ ಕಲಾಜೀವನದ ವಿಕಾಸಕ್ಕೆ ಸರ್ವ ಪ್ರೋತ್ಸಾಹವನ್ನು ನೀಡುತ್ತ ಬಂದಿದೆ. ಮುಟಃ

3ಅ

ಲೇಖನ ಜಿ. ಟಿ. ನಾರಾಯಣರಾವ್
ಚಿತ್ರ: ಕೆ. ಮುರಳೀಧರರಾವ್

ನಕ್ಷತ್ರಲೋಕದ ವಿಚಿತ್ರ ನೃತ್ಯ — ಸೌರವ್ಯೂಹ

ಇರಸ್ ಬಂದ ಸಂದರ್ಭ

ಇನ್‌ಫ್ರಾರೆಡ್ ಅಸ್ಟ್ರಾನಾಮಿಕಲ್ ಸ್ಯಾಟೆಲೈಟ್ ಎಂಬ ಪದಗಳ ಸಂಕ್ಷಿಪ್ತ ರೂಪ ಇರಸ್. ಅತಿರಕ್ತ ಖಗೋಳವೈಜ್ಞಾನಿಕ ಉಪಗ್ರಹ ಎಂದರ್ಥ. ವಿಶ್ವದ ವಿವಿಧ ವಲಯಗಳಿಂದ ಬರುವ ಅತಿರಕ್ತ ವಿಕಿರಣವನ್ನು ಸಂಗ್ರಹಿಸಿ ವಿಶ್ಲೇಷಿಸಿ ಆಕಾಶದ ಅತಿರಕ್ತ ಪಟ ತಯಾರಿಸುವುದು ಉದ್ದೇಶ.

ಅತಿರಕ್ತ ವಿಕಿರಣವೆಂದರೇನು?

ಯಾವುದೇ ನಕ್ಷತ್ರದ ಅಸ್ತಿತ್ವ ನಮಗೆ ತಿಳಿಯುವುದು ಅದರಿಂದ ಬರುವ ಮಾಹಿತಿಯಿಂದ. ಇದು ರೇಡಿಯೊ ಅಲೆಗಳು, ಶಾಖ, ಬೆಳಕು, ಎಕ್ಸ್‌ಕಿರಣಗಳು, ಗ್ಯಾಮಕಿರಣಗಳು ಮುಂತಾದ ಪ್ರಕಾರಗಳಲ್ಲಿ ಬರುತ್ತದೆ. ಇವುಗಳ ಒಟ್ಟು ಹೆಸರು ವಿದ್ಯುತ್ಕಾಂತವಿಕಿರಣ. ಇದರಲ್ಲಿ ನಮ್ಮ ಕಣ್ಣುಗಳು ಬೆಳಕಿಗೆ ಮಾತ್ರ ಸಂವೇದನಶೀಲವಾಗಿವೆ. ಉಳಿದ ಪ್ರಕಾರಗಳನ್ನು ಕುರಿತಂತೆ ನಾವು ~~ಕುರುಡರು~~ ಅಂಧರು. ಎಂದೇ ಬೆಳಕು ದೃಗ್ಗೋಚರ ವಿಕಿರಣ, ಉಳಿದವು ದೃಗಗೋಚರ ವಿಕಿರಣ. ಈ ಎರಡನೆಯ ವಿಭಾಗದ ಯಾವ ಪ್ರಕಾರವನ್ನಾದರೂ ಗ್ರಹಿಸಿ ತಿಳಿಯಲು ವಿಶಿಷ್ಟ ಉಪಕರಣಗಳು ಅಗತ್ಯ. ಉದಾಹರಣೆಗೆ ಬೆಂಗಳೂರು ಆಕಾಶವಾಣಿ ಪ್ರಸಾರಕೇಂದ್ರವನ್ನು ಬರಿಗಿವಿಯ ಶ್ರೋತೃ ಕೇಳಲಾರ, ಆದರೆ ಯುಕ್ತವಾಗಿ ಶ್ರುತಿಗೊಳಿಸಿದ ರೇಡಿಯೊ ಉಪಕರಣದ ನೆರವಿನಿಂದ ಕೇಳಬಲ್ಲ.

ಬಿಳಿಬೆಳಕು ಕೆಂಪಿನಿಂದ ನೇರಿಳೆ ವರೆಗಿನ ಏಳು ಬಣ್ಣಗಳ ಸಂಯುಕ್ತ. ಇವುಗಳ ಪೈಕಿ ಕೆಂಪು ಬಣ್ಣದ ಅಲೆಯುದ್ದ ದೀರ್ಘತಮ, ನೇರಿಳೆ ಬಣ್ಣದ್ದು ಹ್ರಸ್ವತಮ. ಕೆಂಪಿನ ಆಚೆಗೆ ಇದ್ದು ಇದರ ಅಲೆಯುದ್ದಕ್ಕಿಂತ ಹಿರಿ ಅಲೆಯುದ್ದವಿರುವ ದೃಗಗೋಚರ ವಿಕಿರಣಪ್ರಕಾರಕ್ಕೆ ಅತಿರಕ್ತವೆಂದು ಹೆಸರು. ಇದನ್ನು ಕಾಣಲಾರೆವು. ವಿಶಿಷ್ಟ ಉಪಕರಣಗಳ ನೆರವಿನಿಂದ ಮಾತ್ರ ~~ಇದನ್ನು~~ ಗ್ರಹಿಸಬಲ್ಲೆವು.

ವಿಶ್ವದ ಪ್ರತಿಯೊಂದು ವಸ್ತುವೂ — ನೀಹಾರಿಕೆ, ನಕ್ಷತ್ರ, ಗ್ರಹ, ಕ್ಷುದ್ರಗ್ರಹ, ಧೂಮಕೇತು, ರಜೋಮೇಘ ಇತ್ಯಾದಿ — ಅವರವರ ಉಷ್ಣತಾನುಸಾರ ಅತಿರಕ್ತ ವಿಕಿರಣವನ್ನು ಪ್ರಸರಿಸುತ್ತದೆ. ನಿರ್ದಿಷ್ಟತೆಯಲ್ಲಿ ಬೆಳಕಿನ ತೆರದಲ್ಲಿಯೇ ಚಲಿಸುವ ಇವಕ್ಕೆ ನಮ್ಮ ವಾಯುಮಂಡಲ ಮಾತ್ರ ಅಪ್ರವೇಶ್ಯ. ಹೀಗಾಗಿ, ನೆಲದಲ್ಲಿರುವ ನಾವು ವಿಶ್ವದ ಅತಿರಕ್ತ ಮೂಲಗಳನ್ನು ಕುರಿತಂತೆ ಬಹುತೇಕ ಕುರುಡರೇ. ವಾಯುಮಂಡಲಾತೀತ ಪ್ರದೇಶಕ್ಕೆ ಯುಕ್ತ ಉಪಕರಣಸಹಿತ ಹೋಗುವುದೊಂದೇ ಇವನ್ನು 'ಕಾಣಲು' ಇರುವ ಹಾದಿ.

ಇರಸ್ ಮಾಡುತ್ತಿರುವುದು ಈ ಕೆಲಸವನ್ನೇ. 1983 ಜನವರಿ 26ರಂದು ಇದನ್ನು ಉಡಾಯಿಸಲಾಯಿತು. ಇದು ಭೂಮಿಯಿಂದ ಸುಮಾರು 900 ಕಿಮೀ ಎತ್ತರದಲ್ಲಿ ಭೂಧ್ರುವೀಯ ಕಕ್ಷೆಯಲ್ಲಿದೆ. ಇದರಲ್ಲಿ ಹೂಡಿರುವ ಸೂಕ್ಷ್ಮಸಂವೇದನಶೀಲ ಅತಿರಕ್ತಗ್ರಾಹಕ ಉಪಕರಣ ಆಕಾಶದ ವಿವಿಧ ವಲಯಗಳ ಅತಿರಕ್ತ ಮಾಹಿತಿಯನ್ನು ಸಂಗ್ರಹಿಸುತ್ತದೆ.

ಲೇಖನ: ಜಿ.ಟಿ. ನಾರಾಯಣರಾವ್
ಚಿತ್ರ: ಕೆ. ಮುರಲೀಧರರಾವ್

ನಕ್ಷತ್ರಲೋಕದ ವಿಚಿತ್ರ ವೃತ್ತ — ಸೌರವ್ಯೂಹ

ಇರಸ್ ಬಂದ ಸುದ್ದಿ

ಇನ್‌ಫ್ರಾರೆಡ್ ಅಸ್ಟ್ರನಾಮಿಕಲ್ ಸ್ಯಾಟೆಲೈಟ್ ಎಂಬ ಪದಗಳ ಸಂಕ್ಷಿಪ್ತ ರೂಪ ಇರಸ್. ಅತಿರಕ್ತ ಖಗೋಳವೈಜ್ಞಾನಿಕ ಉಪಗ್ರಹ ಎಂದರ್ಥ. ವಿಶ್ವದ ವಿವಿಧ ವಲಯಗಳಿಂದ ಬರುವ ಅತಿರಕ್ತ ವಿಕಿರಣವನ್ನು ಸಂಗ್ರಹಿಸಿ ವಿಶ್ಲೇಷಿಸಿ ಆಕಾಶದ ಅತಿರಕ್ತ ಪಟ ತಯಾರಿಸುವುದು ಉದ್ದೇಶ.

ಅತಿರಕ್ತ ವಿಕಿರಣವೆಂದರೇನು?

ಯಾವುದೇ ನಕ್ಷತ್ರದ ಅಸ್ತಿತ್ವ ನಮಗೆ ತಿಳಿಯುವುದು ಅದರಿಂದ ಬರುವ ಮಾಹಿತಿಯಿಂದ. ಇದು ರೇಡಿಯೋ ಅಲೆಗಳು, ಶಾಖ, ಬೆಳಕು, ಎಕ್ಸ್‌ಕಿರಣಗಳು, ಗ್ಯಾಮಕಿರಣಗಳು ಮುಂತಾದ ಬಗೆಗಳಲ್ಲಿ ಬರುತ್ತದೆ. ಇವುಗಳ ಒಟ್ಟು ಹೆಸರು ವಿದ್ಯುತ್ಕಾಂತ ವಿಕಿರಣ. ಇವುಗಳಲ್ಲಿ ನಮ್ಮ ಕಣ್ಣುಗಳು ಬೆಳಕಿಗೆ ಮಾತ್ರ ಸಂವೇದನಶೀಲವಾಗಿವೆ. ಎಂದರೆ ಇದು ~~ಇತರ~~ ದೃಗ್ಗೋಚರ ವಿಕಿರಣ. ಉಳಿದವು ~~ಬಗೆಗಳು~~ ದೃಗಗೋಚರ ವಿಕಿರಣ. ಉಳಿದವುಗಳನ್ನು ಕುರಿತಂತೆ ನಾವು ಕುರುಡರು. [illegible] ಸಾಲುತ್ತವೆ. ಈ [illegible] ಯಾವುದೇ ಪ್ರಕಾಶವನ್ನಾದರೂ ಗ್ರಹಿಸಿ ತಿಳಿಯಲು ವಿಶೇಷ ಉಪಕರಣಗಳು ಬೇಕಾಗುತ್ತವೆ. ಉ

ಇರಾಸಿನಿಂದ ದೊರೆತ ಮಾಹಿತಿ ಖಗೋಳವಿಜ್ಞಾನಿಗಳ ಎದುರು ನೂತನ ಯುಗಪ್ರವರ್ತಕ ದೃಶ್ಯವೊಂದನ್ನು ಅನಾವರಣಗೊಳಿಸಿದೆ: ವಿಶ್ವದಲ್ಲಿ ನಮ್ಮ ಸೌರವ್ಯೂಹ ಏಕೈಕ ಅಲ್ಲ. ಇನ್ನೂ ಎರಡು ಸೌರವ್ಯೂಹಸದೃಶ ನಕ್ಷತ್ರಗಳಿರುವುದು 1984 ಮಾರ್ಚ್ ತನಕ ದಾಖಲೆ ಆಗಿದೆ. ವೀಣಾ ಪುಂಜದಲ್ಲಿರುವ ಅಭಿಜಿತ್ ಮತ್ತು ದಕ್ಷಿಣಮೀನಪುಂಜದಲ್ಲಿರುವ ಮೀನಾಕ್ಷಿ ಈ ನವಸೂರ್ಯರು. ನಮ್ಮಲ್ಲಿಂದ ಇವುಗಳ ದೂರ ಅನುಕ್ರಮವಾಗಿ 27 ಮತ್ತು 23 ಜ್ಯೋತಿರ್ವರ್ಷಗಳು. (ಸೆಕೆಂಡಿಗೆ 300,000 ಕಿಮೀ ವೇಗದಿಂದ ನೇರ ಧಾವಿಸುವ ಬೆಳಕು ಒಂದು ವರ್ಷದಲ್ಲಿ ಗಳಿಸುವ ದೂರ 1 ಜ್ಯೋತಿರ್ವರ್ಷ.) ಬರಿಗಣ್ಣಿಗೆ ಕಾಣುವ ಈ ನಕ್ಷತ್ರಗಳಿಗೆ ಉಜ್ಜ್ವಲತೆಯ ಮಾನಕದಲ್ಲಿ ಅನುಕ್ರಮವಾಗಿ 5ನೆಯ ಮತ್ತು 1ನೆಯ ಸ್ಥಾನಗಳಿವೆ. (1ನೆಯ ಸ್ಥಾನ ಉಚ್ಚ ಕಕ್ಷೆ.)

ಅಭಿಜಿತ್ತಿನಿಂದ 80 ಖಮಾ ಅಂತರದೊಳಗೆ ಮೃತಕಾಯಗಳು — ನಕ್ಷತ್ರವಲ್ಲದ ಕಾಯಗಳು ಎಂಬ ಅರ್ಥದಲ್ಲಿ — ಅದನ್ನು ಬಳಸುತ್ತಿವೆ ಎಂಬ ಸಂಗತಿ 1983 ಸೆಪ್ಟೆಂಬರಿನಲ್ಲಿ ತಿಳಿದುಬಂದಿತು. (ಸೂರ್ಯ-ಭೂಮಿ ಸರಾಸರಿ ಅಂತರ 1 ~~ಖಮಾ~~ ಖಗೋಳಮಾನ; ಇದರ ಬೆಲೆ 149,600,000 ಕಿಮೀ.) ಮೀನಾಕ್ಷಿಗೆ ಮೃತಕಾಯಗಳ ವಲಯವಿರುವುದು 1984 ಮಾರ್ಚಿಯಲ್ಲಿ ಸ್ಥಿರೀಕೃತವಾಗಿದೆ. ~~ಈ ಮೃತಕಾಯಗಳು~~ ಇವು ಆದಿಮ ಗ್ರಹವ್ಯವಸ್ಥೆಗಳಾಗಿರಬಹುದೆಂದು ~~[illegible]~~ ಊಹೆ.

ಯಾವ ನಕ್ಷತ್ರ ಗ್ರಹಪರಿವೇಷ್ಟಿತವಾಗಿ ~~ರುವುದು ಸಾಧ್ಯ~~ ರಬಹುದು? ನಮ್ಮ ಸೂರ್ಯ ಸದಸ್ಯನಾಗಿರುವ ಆಕಾಶಗಂಗೆಯೊಂದರಲ್ಲೇ 20,000 ಕೋಟಿ ನಕ್ಷತ್ರಗಳಿವೆ. ಇನ್ನು ವಿಶ್ವದಲ್ಲಿ ಎಷ್ಟು ಆಕಾಶಗಂಗೆಗಳಿವೆ ಎಂಬುದು ಚಿದಂಬರ ಅಜ್ಞಾತ. ಪರಿಸ್ಥಿತಿ ಹೀಗಿರುವಾಗ ಪ್ರತಿಯೊಂದು ನಕ್ಷತ್ರವನ್ನು ಗ್ರಹಪರೀಕ್ಷೆಗೆ ಒಳಪಡಿಸುವುದು ಅಸಾಧ್ಯ ಒಂದೇ ಅಲ್ಲ, ಮೂರ್ಖತೆ ಕೂಡ. ಈ ಸಮಸ್ಯೆಯನ್ನು ಬಗೆಹರಿಸಲು ವಿಜ್ಞಾನಿಗಳು ಮೊದಲಿಗೆ 9000 ನಕ್ಷತ್ರಾಭ್ಯರ್ಥಿಗಳನ್ನು ಆಯ್ದರು. ಈ ಯಾದಿಯನ್ನು ಕೇವಲ 50ಕ್ಕೆ ಬಟ್ಟಿ ಇಳಿಸಿ ಈ ಗಟ್ಟಿಕಾಳುಗಳನ್ನು ಸೂಕ್ಷ್ಮತಪಾಸಣೆಗೆ ಒಳಪಡಿಸಿದರು. ಇದರಲ್ಲಿ ತೇರ್ಗಡೆ ಆದವು, ಈ ಹಿಂದೆ ಹೇಳಿದಂತೆ, ಅಭಿಜಿತ್ ಮತ್ತು ಮೀನಾಕ್ಷಿ.

ಸೌರವ್ಯೂಹವೆಂದರೇನು?

ಸೂರ್ಯ ನಮ್ಮ ನಕ್ಷತ್ರ. ನಮಗೆ ಬೆಳಕು ಶಾಖ ಮುಂತಾದ ವಿಕಿರಣಪ್ರಕಾರಗಳನ್ನು ಸಮೃದ್ಧವಾಗಿ ಪ್ರದಾನಿಸುವ ಅಕ್ಷಯಪಾತ್ರೆ. ಇದರ ಸುತ್ತ ಬುಧನಿಂದ ತೊಡಗಿ ಪ್ಲೂಟೋವರೆಗೆ ಒಂಬತ್ತು ಗ್ರಹಗಳು ತಮ್ಮ ಉಪಗ್ರಹ ಹಾಗೂ ಬಳೆ ಪರಿವಾರಗಳ ಸಹಿತ ಸುಮಾರು ವೃತ್ತ ಕಕ್ಷೆಗಳ ಮೇಲೆ ನಿರ್ದಿಷ್ಟ ವೇಗಗಳಿಂದ ನಿತ್ಯಸಂಚಾರಿಗಳಾಗಿವೆ. ಕುಜ ಮತ್ತು ಗುರು ಕಕ್ಷೆಗಳ ನಡುವೆ ಕ್ಷುದ್ರಗ್ರಹಗಳ ಪ್ರವಾಹ ಕೂಡ ಈ ಮನೆವಾರ್ತೆಯಲ್ಲಿ ಭಾಗಿಯಾಗಿದೆ. ಬಾನಪಟದಲ್ಲಿ ಹಠಾತ್ತನೆ ಕರ್ಪೂರಾರತಿ ಬೆಳಗಿ ಬೆಂಕಿಗೆರೆ ಗೀಚಿ ಅದೃಶ್ಯರಾಗುವ ಯಾವ ಉಲ್ಕೆಗಳು ಬಾನಂಗಳವನ್ನು ಗುಡಿಸಿ ಶುಚಿಗೊಳಿಸುವ

(3)

ಕಾಲರಾಯ ಆಗ ಈಗ ನಿಯೋಜಿಸುವ ಕಶಬಂಗೆಗಳೋ ಎಂಬಂತೆ ಮೈದೋರುವ ಧೂಮಕೇತುಗಳು ರವಿರಾಜನಿಗೆ ನಜರೊಪ್ಪಿಸುವುದರಲ್ಲಿ ಹಿಂದೆಬಿದ್ದಿಲ್ಲ. ಸೂರ್ಯ ಮತ್ತು ಇದರ ಯಾಂತ್ರಿಕ ಸಮುದಾಯಕ್ಕೆ ಒಟ್ಟಾಗಿ ಸೌರವ್ಯೂಹವೆಂದು ಹೆಸರು. ಇದೊಂದು ಸ್ವತಂತ್ರ ಸಂಯುಕ್ತ ವ್ಯವಸ್ಥೆ. ಇಲ್ಲಿಯ ಗ್ರಹೋಪಗ್ರಹಗಳ ಸಮಗ್ರರಾಶಿ ಸೌರರಾಶಿಯ ಶೇಕಡಾ 0.15ಕ್ಕಿಂತಲೂ ಕಡಿಮೆ. ಎಂದರೆ ಬಲಕೇಂದ್ರ ಸೂರ್ಯನ ಸುತ್ತ ಇತರ ಎಲ್ಲ ಕಾಯಗಳು ಪರಿಭ್ರಮಿಸುವುದು ಅನಿವಾರ್ಯವಾಗಿದೆ.

ಗ್ರಹಗಳ ಚಲನನಿಯಮಗಳನ್ನು ಆವಿಷ್ಕರಿಸಿ ಖಗೋಳವಿಜ್ಞಾನವನ್ನು ಭೌತವಿಜ್ಞಾನದ ಸುಭದ್ರ ಅಡಿಪಾಯದ ಮೇಲೆ ನೆಲೆಗೊಳಿಸಿದ ಯೊಹಾನ್ ಕೆಪ್ಲರ್ (1571-1630) ಭಗವಂತ ಪ್ರಚಂಡ ಗಣಿತ ಧೀಮಂತ, ಆತನ ಮಹೋನ್ನತ ಸೃಷ್ಟಿ ಈ ಸೌರವ್ಯೂಹ, ಇದೊಂದು ಅದ್ಭುತ ಗಣಿತರಚನೆ, ಇದರ ಶೋಧನೆ ತನ್ನ ಬಾಳಗೋಗಬೇಕು ಎಂದು ಪ್ರಾಮಾಣಿಕವಾಗಿ ನಂಬಿ ಆ ದಿಶೆಯಲ್ಲಿ ಕಾರ್ಯೋದ್ಯುಕ್ತನಾಗಿ ತನ್ನ ಸಂಶೋಧನಜೀವನದ ಅತ್ಯಂತ ಫಲಪ್ರದ ಅವಧಿಯನ್ನು, 1586-1600, ಈ ಹುಚ್ಚು ಕುದುರೆ ಬೆನ್ನ ಹತ್ತಿ ವ್ಯರ್ಥ ಕಳೆದುಕೊಂಡ. ಈ ಪ್ರಯತ್ನದಲ್ಲಿ ಪ್ರತೀಕ ಪ್ರಮಾಣಸನೆಗೊಂಡ ಬಳಿಕ ವೈಜ್ಞಾನಿಕ ವಿಧಾನದಲ್ಲಿ ಅನ್ವೇಷಣೆ ಮುಂದುವರಿಸಿ ನಿಜವಾದ ಗಣಿತನಿಯಮಗಳನ್ನು ಪತ್ತೆ ಹಚ್ಚಿದ (1605-19). ಕೆಪ್ಲರನ ನಿಯಮಗಳೆಂದು ಪ್ರಸಿದ್ಧವಾಗಿರುವ ಇವು ಸೂರ್ಯನಿಗೆ ಸಾಪೇಕ್ಷವಾಗಿ ಗ್ರಹದ ಕಕ್ಷೆಯನ್ನು ಕಕ್ಷಾವೇಗವನ್ನು ಪರಿಭ್ರಮಣಾವಧಿಯನ್ನು ಖಚಿತ ಗಣಿತ ಪರಿಭಾಷೆಯಲ್ಲಿ ನಿರೂಪಿಸುತ್ತವೆ.

ಈ ನಿಯಮಗಳ ತಳದಲ್ಲಿ ಹುದುಗಿರುವ ಕಾರಣ ಶೋಧಿಸಿದವ ಐಸಾಕ್ ನ್ಯೂಟನ್ (1642-1727). ಈತ ಆವಿಷ್ಕರಿಸಿದ ವಿಶ್ವಗುರುತ್ವಾಕರ್ಷಣನಿಯಮ ಸಮಸ್ತ ಕಾಯಗಳನ್ನು ನೇಯ್ದು ಆಳುತ್ತಿರುವ ಅಗೋಚರ ಆದರೂ ಅತಿ ವಾಸ್ತವ ಗುರುತ್ವ ಬಲದ ಪರಿಮಾಣ ಅಳೆಯುವ ಗಣಿತಸೂತ್ರ ನೀಡಿತು (1665-66). ಟೈಟಿಯಸ್ ಎಂಬಾತ ಸೂರ್ಯನಿಂದ ಗ್ರಹಗಳ ಸರಾಸರಿ ದೂರಗಳನ್ನು ಖಗೋಳಮಾನಗಳಲ್ಲಿ ಬರೆದು (ಬುಧ 0.387, ಶುಕ್ರ 0.723, ಭೂಮಿ 1, ಕುಜ 1.523, ಗುರು 5.202, ಶನಿ 9.554) ಈ ಸಂಖ್ಯಾಶ್ರೇಣಿಯನ್ನು ಉತ್ಪಾದಿಸುವ ಗಣಿತ ಸೂತ್ರವನ್ನು ಶೋಧಿಸಿದ (1766). ಇದನ್ನು ಪ್ರಕಟಿಸಿದವ ಯೊಹಾನ್ ಬೋಡ್ (1747-1826). ಟೈಟಿಯಸ್-ಬೋಡ್ ಸೂತ್ರವೆಂದೇ ಪ್ರಸಿದ್ಧವಾಗಿರುವ ಇದರ ಪ್ರಕಾರ ಸೂರ್ಯನಿಂದ 2.8 ಖಮಾ ದೂರದಲ್ಲಿ — ಅಂದರೆ ಕುಜ ಮತ್ತು ಗುರು ಕಕ್ಷೆಗಳ ನಡುವಿನ ವಿಶಾಲ ತೆರಪಿನಲ್ಲಿ ಒಂದು ಗ್ರಹವಿರಬೇಕೆಂದು ತಿಳಿಯಿತು. ಇದರ ಅಸ್ತಿತ್ವದ ಶೋಧನೆ ಆ ತನಕ ಆಗಿರಲಿಲ್ಲ. ~~ತನಕ ತಿಳಿದಿರಲಿಲ್ಲ~~. ಹೀಗಾಗಿ ಸಂಖ್ಯೆ 2.8ಕ್ಕೆ ಬೋಡನ ತೆರಪು ಎಂಬ ಹೆಸರು ಬಂತು. ~~ಈ ತೆರಪು~~ ಇದನ್ನು ಭರ್ತಿಮಾಡಬಲ್ಲ 6ನೆಯ ~~ಗ್ರಹ~~ ಗ್ರಹದ ಅನ್ವೇಷಣೆ ಭರದಿಂದ ಮುಂದುವರಿಯಿತು. ಗ್ಯುಸೆಪ್ಪೆ ಪಿಯಾಟ್ಸಿ (1746-1826) ಎಂಬಾತ 1.1.1801ರಂದು

ಆಕಸ್ಮಿಕವಾಗಿ ಒಂದು ನೂತನ ಕ್ಷುದ್ರಕಾಯವನ್ನು ಗುರುತಿಸಿದ. ಇದರ ಕಕ್ಷೆ ಬೋಡನ ತೆರಪಿಗೆ ಹೊಂದಿಕೊಂಡಾಗ, ಮತ್ತು ತರುವಾಯದ ದಿನಗಳಲ್ಲಿ ಕ್ಷುದ್ರಕಾಯಗಳು ದಂಡಿ ಪತ್ತೆಯಾಗಿ ಎಲ್ಲದರ ಕಕ್ಷೆಗಳೂ ಅದೇ ತೆರಪಿನಲ್ಲಿ ಇರುವುದಾಗ ಸೌರವ್ಯೂಹದ ಗಣಿತರಹಸ್ಯ ಕೈವಶವಾಯಿತೆಂದು ವಿಜ್ಞಾನಿಗಳು ಉತ್ಸಾಹಿತರಾದರು.

ಯಾದೃಚ್ಛಿಕತೆ ಅಥವಾ ಕ್ರಮರಾಹಿತ್ಯವೇ ವಿಶ್ವದ ಸಾರ್ವತ್ರಿಕ ನಿಯಮ ಎಂಬುದು ಇಂದಿನ ತಿಳುವಳಿಕೆ. ಆದರೆ ತದ್ವಿರುದ್ಧವಾಗಿ ಸೌರವ್ಯೂಹದಲ್ಲಿ ಮಾತ್ರ ಕ್ರಮಬದ್ಧತೆ ಇರುವುದು ಎದ್ದು ಕಾಣುತ್ತದೆ: ಸಮಸ್ತ ಗ್ರಹಗಳೂ ಸೂರ್ಯನ ಸುತ್ತ ಒಂದೇ ದಿಶೆಯಲ್ಲಿ ಸರಿಸುಮಾರಾಗಿ ವರ್ತುಲೀಯ ಕಕ್ಷೆಗಳ ಮೇಲೆ ಗಣಿತಸೂತ್ರ ನಿರ್ಧರಿಸುವ ದೂರಗಳಲ್ಲಿ ಪರಿಭ್ರಮಿಸುತ್ತವೆ; ಗಾತ್ರದಲ್ಲೂ ಭಾರದಲ್ಲೂ ಹಿರಿದಾದ ಗುರು ಶನಿ ಮುಂತಾದ ದೈತ್ಯಗ್ರಹಗಳು ಸೂರ್ಯನಿಂದ ದೂರವಾಗಿದ್ದು ಸಾಂದ್ರತೆಯಲ್ಲಿ ಇವನ್ನು ಮೀರಿಸುವ ಬುಧ ಶುಕ್ರ ಭೂಮಿ ಕುಜ ಎಂಬ ~~ಅಲ್ಪಗ್ರಹ~~ ಕುಬ್ಜಗ್ರಹಗಳು ಸೂರ್ಯನಿಗೆ ಸಮೀಪವಾಗಿವೆ, ಇತ್ಯಾದಿ. ಸೌರವ್ಯೂಹಕ್ಕೆ ಈ ಕ್ರಮಬದ್ಧತೆ ಒದಗಿದ್ದರ ಹಿಂದಿರುವ ಪ್ರೇರಕ ಬಲಗಳು ಆಕಸ್ಮಿಕ ಯೋಗಾಯೋಗವೆಂದು ವಿಜ್ಞಾನಿಗಳು ಭಾವಿಸರು. ಆ ವಿಶೇಷ ಸನ್ನಿವೇಶದ ~~ಸತ್ಯ~~ ಅನ್ವೇಷಣೆ ಅವರೆದುರು ನಿಂತ ಮುಂದಿನ ಸವಾಲು.

ದ್ವೈತವು ಸರಿಯಾ ಅದ್ವೈತವು ಸರಿಯಾ?

ಸೌರವ್ಯೂಹದ ಉಗಮ ಕುರಿತು ಮಂಡಿಸಲಾದ ವಿವಿಧ ಊಹೆಗಳನ್ನು ಅದ್ವೈತವಾದ ಮತ್ತು ದ್ವೈತವಾದ ಎಂಬ ಎರಡು ವಿಭಾಗಗಳಲ್ಲಿ ಅಳವಡಿಸಬಹುದು.

ಅದ್ವೈತವಾದದ ಪ್ರಕಾರ ಆದಿಮ ಸೂರ್ಯನನ್ನು ಬೃಹದ್ಗಾತ್ರದ ನೀಹಾರಿಕೆ ಆವರಿಸಿಕೊಂಡಿತ್ತು. ಇದು ತನ್ನ ಸುತ್ತ ಅತಿ ರಭಸವಾಗಿ ಆವರ್ತಿಸುತ್ತಿತ್ತು. ನೀಹಾರಿಕೆಯಿಂದ ಉಂಗುರಗಳು ಕ್ರಮೇಣ ಒಂದೊಂದಾಗಿ ಬೇರ್ಪಟ್ಟು ಸೂರ್ಯನ ಸುತ್ತ ವಿವಿಧ ಅಂತರಗಳಲ್ಲಿ ತಿರುಗುವ ಚಕ್ರಗಳಾದುವು — ಶನಿಯ ಬಳೆಗಳಂತೆ. ಇವು ಘನೀಭವಿಸಿ ಆಯಾ ದೂರಗಳಲ್ಲಿ ಗ್ರಹಗಳು ಮೈದಳೆದುವು. ಅದ್ವೈತವಾದದ ಪ್ರವರ್ತಕರಲ್ಲಿ ಮುಖ್ಯನಾದವ ಪಿಯರಿ ಸೈಮನ್ ಲಾಪ್ಲಾಸ್ (1749-1827). ಮಂಡನೆ ಇಸವಿ 1796. ಮೇಲುನೋಟಕ್ಕೆ ಇದು ಸೌರವ್ಯೂಹದ ಕ್ರಮಬದ್ಧತೆಯನ್ನು ಯಶಸ್ವಿಯಾಗಿ ವಿವರಿಸಿದಂತೆ ಭಾಸವಾಯಿತು.

ಆದರೆ ಶತಮಾನ ಸಂದಂತೆ ಹೊಸ ಮಾಹಿತಿ ಸಂಗ್ರಹವಾಗಿ ಅದ್ವೈತವಾದದ ಅಸಮರ್ಪಕತೆ ಸ್ಪಷ್ಟವಾಯಿತು. ಆಗ ಬಂದದ್ದೇ ದ್ವೈತವಾದ. ಇದರ ಪ್ರಕಾರ ಆಕಾಶದ ಅಸೀಮ ವಿಸ್ತಾರದಲ್ಲಿ ನಕ್ಷತ್ರಗಳ ದಟ್ಟಣೆ ಸಮ ಎಲ್ಲ ಕಡೆಗಳಲ್ಲಿಯೂ ಹಂಚಿಹೋಗಿಲ್ಲ. ದಟ್ಟಣೆಗಿಂತ ವಿರಳವಾಯು ಕಡಿಮೆ. ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕ್ ಸಾಗರಗಳಲ್ಲಿ ಒಂದೊಂದು ಹಿಮಗಲ್ಲನ್ನು ತೇಲಬಿಟ್ಟು ಅವು [illegible] ಅಲೆಯುವಂತೆ ಬಿಟ್ಟಿದ್ದರೆ ಹಲವು ಕೋಟಿ ವರ್ಷಗಳಾದಾಗ ಒಂದು ಇನ್ನೊಂದರ ಸನಿಹದಲ್ಲಿ ಹಾದುಹೋಗುವ ಸಂಭಾವ್ಯತೆ ಇದೆಯೋ ಆಕಾಶಸಾಗರದಲ್ಲಿರುವ ನಕ್ಷತ್ರನೌಕೆಗಳ ಬಗೆಗೆ ಹೇಳುವುದಾದರೆ ಈ ಅಘಟಿತ ಘಟನೆ ಕೂಡ

ಲೇಖನ ಟಿ.ಆರ್. ನಾರಾಯಣರಾವ್
ಚಿತ್ರ: ಕೆ. ಮುರಳೀಧರರಾವ್

ನಕ್ಷತ್ರಲೋಕದ ವಿಚಿತ್ರ ಸೃಷ್ಟಿ — [illegible]

ಇರಾಸ್ ಬಂದ ನಂತರ

ಇನ್‌ಫ್ರಾರೆಡ್ ಅಸ್ಟ್ರಾನಮಿಕಲ್ ಸ್ಯಾಟೆಲೈಟ್ ಎಂಬ ಪದಗಳ ಸಂಕ್ಷಿಪ್ತ ರೂಪ ಇರಾಸ್. ಅವರಕ್ತ ಖಗೋಳವಿಜ್ಞಾನಕ ಉಪಗ್ರಹ ಎಂದರ್ಥ. ವಿಶ್ವದ ವಿವಿಧ ವಲಯಗಳಿಂದ ಬರುವ ಅವರಕ್ತ ವಿಕಿರಣವನ್ನು ಸಂಗ್ರಹಿಸಿ ವಿಶ್ಲೇಷಿಸಿ ಆಕಾಶದ ಅವರಕ್ತ ನಕ್ಷೆ ತಯಾರಿಸುವುದು ಉದ್ದೇಶ.

ಅವರಕ್ತ ವಿಕಿರಣವೆಂದರೇನು?

ಯಾವುದೇ ನಕ್ಷತ್ರದ ಅಸ್ತಿತ್ವ ನಮಗೆ ತಿಳಿಯುವುದು ಅದರಿಂದ ಬರುವ ಮಾಹಿತಿಯಿಂದ. ಇದು ರೇಡಿಯೋ ಅಲೆಗಳು, ಶಾಖ, ಬೆಳಕು, ಅತಿನೇರಳೆ ಕಿರಣಗಳು, ಗಾಮಾ ಕಿರಣಗಳು ಮುಂತಾದ ರೂಪಗಳಲ್ಲಿ ಬರುತ್ತದೆ. ಇವುಗಳ ಒಟ್ಟು ಹೆಸರು ವಿದ್ಯುತ್ಕಾಂತ ವಿಕಿರಣ. ಇದರಲ್ಲಿ ನಮ್ಮ ಕಣ್ಣುಗಳು ಬೆಳಕಿಗೆ ಮಾತ್ರ ಸಂವೇದನಾಶೀಲವಾಗಿವೆ. ಉಳಿದ ರೂಪಗಳನ್ನು ಕುರಿತಂತೆ ನಾವು ಕುರುಡರು. ಎಂದೇ ಬೆಳಕು ದೃಗ್ಗೋಚರ ವಿಕಿರಣ, ಉಳಿದವು ಅದೃಗ್ಗೋಚರ ವಿಕಿರಣ. ಈ ಎರಡನೆಯ ವಿಭಾಗದ ಯಾವುದೇ ರೂಪವನ್ನಾದರೂ ಗ್ರಹಿಸಿ ತಿಳಿಯಲು ವಿಶೇಷ ಉಪಕರಣಗಳು ~~ಬೇಕಾಗುತ್ತವೆ~~. ಉದಾಹರಣೆಗೆ ಬೆಂಗಳೂರು ಆಕಾಶವಾಣಿ ಪ್ರಸಾರಕೇಂದ್ರವನ್ನು ಬೆಳಗಾವಿಯ ಶ್ರೋತೃ ಕಾಣಲಾರ, ಯುಕ್ತವಾಗಿ ಶ್ರುತಿಗೊಳಿಸಿದ ರೇಡಿಯೋ ಉಪಕರಣದ ನೆರವಿನಿಂದ ಕೇಳಬಲ್ಲ.

ಬಿಳುಪು ಕೆಂಪಿನಿಂದ ನೇರಳೆ ವರೆಗಿನ ಏಳು ಬಣ್ಣಗಳ ಸಂಯುಕ್ತ. ~~ಬೆಳಕು~~. ಇವುಗಳ ಪೈಕಿ ಕೆಂಪು ಬಣ್ಣದ ಅಲೆಯುದ್ದ ದೀರ್ಘತಮ, ನೇರಳೆ ಬಣ್ಣದ್ದು ಹ್ರಸ್ವತಮ. ಕೆಂಪಿನ ಒತ್ತಿಗೆ ಇದ್ದು ಇದರ ಅಲೆಯುದ್ದಕ್ಕಿಂತ ಹೆಚ್ಚು ಅಲೆಯುದ್ದವಿರುವ ದೃಗ್ಗೋಚರ ವಿಕಿರಣಪ್ರಕಾರಕ್ಕೆ ಅವರಕ್ತವೆಂದು ಹೆಸರು. ~~[illegible]~~ ಇದರ ಗ್ರಹಿಕೆಗೆ ವಿಶೇಷ ಉಪಕರಣ ಅಗತ್ಯ.

ವಿಶ್ವದ ಪ್ರತಿಯೊಂದು ವಸ್ತುವೂ — ನಕ್ಷತ್ರ, ಗ್ರಹ, ಕ್ಷುದ್ರಗ್ರಹ, ಧೂಮಕೇತು, ರಜೋಮೇಘ ಇತ್ಯಾದಿ — ಅದರದರ ಉಷ್ಣತಾನುಸಾರ ಅವರಕ್ತ ವಿಕಿರಣವನ್ನು ಪ್ರಸರಿಸುತ್ತದೆ. ನಿಸರ್ಗಪ್ರಕೃತಿಯಲ್ಲಿ ಬೆಳಕಿನ ತೆರದ ಹಾಗೇ ಚಲಿಸುವ ಈ ವಿಕಿರಣವು ನಮ್ಮ ವಾಯುಮಂಡಲದ ~~[illegible]~~ ಮಾತ್ರ ಅತ್ಯಲ್ಪ ಪ್ರಮಾಣ ~~[illegible]~~. ನೆಲದಲ್ಲಿರುವ ನಾವು ವಿಶ್ವದ ಅವರಕ್ತ ಮಾಹಿತಿಗಳನ್ನು ಕುರಿತಂತೆ ಬಹುತೇಕ ಕುರುಡರೇ. ಇವನ್ನು 'ಕಾಣಲು' ವಾಯುಮಂಡಲಾತೀತ ಪ್ರದೇಶಕ್ಕೆ ಯುಕ್ತ ಉಪಕರಣಸಹಿತ ಹೋಗುವುದೊಂದೇ ಹಾದಿ. ಇರಾಸ್ ಮಾಡುತ್ತಿರುವುದು ಈ ಕೆಲಸವನ್ನೇ.

~~[illegible]~~ 1983 ಜನವರಿ 26ರಂದು ಇದನ್ನು ಉಡಾಯಿಸಲಾಯಿತು. ಭೂಮಿಯಿಂದ ಸುಮಾರು 900 ಕಿಮೀ ಎತ್ತರದಲ್ಲಿ ಇದು ಧ್ರುವೀಯ ಕಕ್ಷೆಯಲ್ಲಿದೆ. ಇದರಲ್ಲಿ ಹೂಡಿರುವ ಅತಿಸಂವೇದನಶೀಲ ಅವರಕ್ತಗ್ರಾಹಕ ಉಪಕರಣ ಆಕಾಶದ ವಿವಿಧ ವಲಯಗಳ ಅವರಕ್ತ ಮಾಹಿತಿಯನ್ನು ಸಂಗ್ರಹಿಸುತ್ತದೆ.

(5)

ಸಂಭಾವ್ಯವಲ್ಲ. ಹಾಗಿದ್ದರೂ ಸೂರ್ಯನನ್ನು ಸುತ್ತುತ್ತ ಈ ಅತಿ ಅಸಂಭಾವ್ಯ 'ಘಟನೆ' ಒಮ್ಮೆ ಸಂಭವಿಸಿಯೇಬಿಟ್ಟಿತು. ಸೂರ್ಯನ ಸಮೀಪಕ್ಕಾಗಿ ಹಾದುಬಂದಿದ್ದ ಆಗಂತುಕ ನಕ್ಷತ್ರ ಸೂರ್ಯನಿಂದ ಸೆಳೆದುಕೊಂಡ ಭಾಗಕ್ಕೆ ಇತ್ತ ಸಾಕಷ್ಟು ವೇಗವಿದ್ದುದರಿಂದ ಸೂರ್ಯನ ಮೇಲೆ ಬೀಳಲಾರದೆ ಅತ್ತ ತಕ್ಕಷ್ಟು ವೇಗವಿಲ್ಲದಿದ್ದುದರಿಂದ ಆಗಂತುಕ ನಕ್ಷತ್ರದ ಹಿಂದೆ ಹೋಗಲಾರದೆ ಸೂರ್ಯನ ಸುತ್ತ ಅಂಡಲೆಯುವ ಅಂತರಪಿಶಾಚಿಯಾಯಿತು. ಇದರಲ್ಲಿ ಕಾಲ ಕ್ರಮೇಣ ಅನಿಲಗೋಳಗಳು ಸಂಘನಿಸಿ ಗ್ರಹಗಳು ~~[illegible]~~ ರೂಪುಗೊಂಡುವು.

ಧ್ವನಿತವಾದ ಅತ್ಯಂತ ಜನಪ್ರಿಯವಾದದ್ದು ಅದರ ಮೌಲ್ಯಯುತ ವೈಜ್ಞಾನಿಕ ಸ್ವರೂಪದಿಂದ ಅಲ್ಲ; ಬದಲು ಅದು ಮಾನವನ ಸ್ವ-(ಅಥವಾ ಕು-)ಪ್ರತಿಷ್ಠೆಗೆ ಪ್ರೋತ್ಸಾಹಕ ವಾಗಿದ್ದ ಒಂದು ಕಾರಣದಿಂದ ~~ವಾಗಿದ್ದುದರಿಂದ~~! ಸೌರವ್ಯೂಹ ಎನ್ನುವ ಸಂರಚನೆ ವಿಶ್ವದಲ್ಲಿ ಏಕಮೇವಾದ್ವಿತೀಯವೆಂದು ಸಾಧಿಸುವುದರ ಮೂಲಕ ಇದು ಮಾನವ ಒಬ್ಬನೇ ವಿಶ್ವದ ಬುದ್ಧಿವಂತ ಪ್ರಜೆ ಎಂಬ ಅಗ್ಗ ಆತ್ಮಾಭಿಮಾನಕ್ಕೆ ತನಿ ಎರೆಯಿತು.

1957ರಲ್ಲಿ ಆಕಾಶಯುಗ ಆರಂಭವಾಯಿತು. ವಿಜ್ಞಾನ ಮತ್ತು ತಂತ್ರವಿದ್ಯೆಗಳಿಗೆ ವಿಶ್ವದ ವಿಚಾರವಾಗಿ ಅನಂತಾಲ್ಯ ~~[illegible]~~ ಸುಳುಹು ಲಭ್ಯವಾದವು. ~~ವಿಜ್ಞಾನಿಗಳಿಗೆ ಲಭ್ಯವಾದವು ವಿಜ್ಞಾನ ಮತ್ತು ತಂತ್ರ~~. ಆಧುನಿಕ ನೂತನ ಮಾಹಿತಿಗಳು ಹಿಂದಿನ ಹಿಗ್ಗನ್ನೇ ಅವರಾಗಿ ಎಡವಿ ಸಂಧಿಸಿದ್ದರು. ಜ್ಞಾನದ ಈ ಬೆಳಕಿನ ಪ್ರಭೆಯಲ್ಲಿ ಧ್ವನಿತವಾದಗಳಿಂದ ಎಂಬುದು ಬೇರೆಯೇ ಒಂದು ವಾದ ಕ್ರಮೇಣ ಸಂಚಯನಗೊಂಡಿತು.

ಸಂಚಯನವಾದ   15,000,000,000

15 ಬಿಲಿಯನ್ (150 ಬಳಿಕ 9 ಸೊನ್ನೆ) ವರ್ಷಗಳ ಹಿಂದಿನ ಕತೆ. ಆಗ ವಿಶ್ವದ ಸಮಸ್ತ ದ್ರವ್ಯವೂ ಕೇಂದ್ರೀಕೃತ ಅನಿಲರೂಪದಲ್ಲಿ ಪಟ್ಟುಗೊಂಡಿತ್ತು. ಇದು ಅಂಡವಿಶ್ವ. ಇದರ ಗರ್ಭದಲ್ಲಿ ಸಂಭವಿಸಿದ ಆಸ್ಫೋಟನೆಯ ಫಲವಾಗಿ ಪ್ರಸಕ್ತ ವಿಶ್ವ — ಅಂದರೆ ದೇಶ ಮತ್ತು ಕಾಲ — ಆರಂಭವಾಯಿತು. ಈ ಆದಿ ಘಟನೆಗೆ ಮಹಾಬಾಜನೆ ಎಂದು ಹೆಸರು. ಇದರ ತಾಡನೆಗೀಡಾದ ಅಂಡವಿಶ್ವ ಮುಷ್ಟಿಗಾತ್ರ ಅನಿಲರಾಶಿಗಳು ಎಲ್ಲ ದಿಶೆಗಳಿಗೂ ಮಹಾರಭಸದಿಂದ ಎರಚಲ್ಪಟ್ಟುವು. ಇವು ಆದಿಮ ನಿಹಾರಿಕೆಗಳು. ತಮ್ಮ ಮುಂದಿನ ಕ್ರಿಯೆಗೆ ಒಳಗಾಗಿದ್ದ ಇವುಗಳ ಒಡಲಲ್ಲಿ ವಿವಿಧ ರಾಶಿಗಳ ಅನಿಲಗೋಳಗಳು ಸಂಚಯಿಸಿದುವು — ಮೊಸರು ಕಡೆವಾಗ ಬೆಣ್ಣೆ ಮುದ್ದೆಗಳು ತೇಲುವಂತೆ. ಸಂಧಿಸ್ಥ ರಾಶಿ ~~[illegible]~~ ಅಧಿಕ ರಾಶಿಯ ಗೋಳಗಳ ಗರ್ಭದಲ್ಲಿ ಶಾಖ ವಿಕಾಸಗೊಂಡು ಪ್ರಭಾಸಿ ಆದಿಮ ನಕ್ಷತ್ರಗಳು ಜನಿಸಿದುವು. ಕೆಲವು ರಾಶಿಯವು ಜಡಕಾಯಗಳಾಗಿ ಉಳಿದುಕೊಂಡುವು — ನೀರ ಹನಿಯಲ್ಲಿ ರಾಡಿ ಕಸಕಡ್ಡಿ ಮತ್ತು ಬಗ್ಗಡ ಹುದುಗಿರುವಂತೆ. ಬಲಿಷ್ಠ ನಕ್ಷತ್ರಗಳ ಸುತ್ತ ತೆಕ್ಕೆಗೆ ಒಳಗಾಗುವ ಜಡಕಾಯಗಳು ಒಂದೋ ಅವುಗಳ ಮೇಲೆಯೇ ಬಿದ್ದು ಆಹುತಿಯಾಗುತ್ತವೆ, ಇಲ್ಲವೆ ಅವನ್ನು ವಿವಿಧ ದೂರಗಳಲ್ಲಿ ಪರಿಭ್ರಮಿಸುವ ವ್ಯೂಹಕಾಯಗಳ ಸಮುಚ್ಚಯಗಳಾಗುತ್ತವೆ. ಇವು ~~[illegible]~~ ಕಾಲಾಂತರದಲ್ಲಿ ಸಂಚಯನಗೊಂಡು ~~[illegible]~~ ಗ್ರಹಗಳಾಗುತ್ತವೆ. ಇದಿಷ್ಟು ಸಂಚಯನವಾದದ ಸಾರ.

ಸುಮಾರು 4.6 ಬಿಲಿಯನ್ ವರ್ಷಗಳ ಹಿಂದೆ ನಮ್ಮ ಸೂರ್ಯ

⑥

ಇದರ ಗ್ರಹಪರಿವಾರವೇಕೆ ಈ ರೀತಿ ಬೆಳೆದು ಬಂದಿತೆಂದು ಸಂಶಯವಾದ ತಿಳಿಸು
ತ್ತದೆ. ಅಲ್ಲಿಗೆ ಸೂರ್ಯನಿಗಾಗಲಿ ಇತರ ಯಾವುದೇ ನಕ್ಷತ್ರಗಳಿಗಾಗಲಿ ಗ್ರಹಮಾಲೆ
ರೂಪುಗೊಳ್ಳುವುದು ಆಕಸ್ಮಿಕತೆಯ ವಿರಳ ಘಟನೆಯಲ್ಲ, ಬದಲು ಸಾಮಾನ್ಯ ಪ್ರಕ್ರಿಯೆ
ಗಳ ಒಂದು ಅಂಗ, ಆದ್ದರಿಂದ ಇದರಲ್ಲಿ ಅಸಾಧಾರಣವಾದದ್ದು ಏನೂ ಇಲ್ಲ
ಎಂಬುದು ಸ್ಪಷ್ಟ. ಹಾಗಿದ್ದ ಮೇಲೆ ಸೌರವ್ಯೂಹ ಏಕೈಕವಲ್ಲ? ಅಲ್ಲ ಎನ್ನುತ್ತದೆ
ಸಂಶಯವಾದ. ಇದನ್ನು ಒಪ್ಪಿಕೊಂಡರೆ ಸಹಜವಾಗಿ ಹುಟ್ಟುವ ಮುಂದಿನ
ಪ್ರಶ್ನೆ: ಇತರೆಡೆ ಬೇರೆ ಸೌರವ್ಯೂಹಗಳಿವೆಯೇ? ಇವೆ ಎಂದು ನಂಬಿ
ಇವುಗಳ ಶೋಧನೆಗೆ ಮುಂದಾಗಿದ್ದ ವಿಜ್ಞಾನಿಗಳ ಪ್ರಯತ್ನಕ್ಕೆ ಇರಾಸ್
ಬಿಂದ ಸಿದ್ಧಿ ವಿನಾಯಕ ವಿಜಯ ತಂದುಕೊಟ್ಟಿದೆ.

ಹಾಗಾದರೆ ಅನ್ಯಲೋಕಗಳಲ್ಲಿ ಮಾನವನಂಥ ಬುದ್ಧಿವಂತ ಜೀವಿಗ
ಳಿವೆಯೇ? ಈ ಜಟಿಲ ಪ್ರಶ್ನೆಗೆ ಸರಿ ಉತ್ತರ: ಕಾದು ನೋಡಿ!

7-4-1984

ದೂರವಾಣಿ 25759
ಜಿ.ಟಿ. ನಾರಾಯಣರಾವ್
ಅತ್ರಿ
ಎಂಟನೆಯ ಅಡ್ಡರಸ್ತೆ
ಸರಸ್ವತಿಪುರ
ಮೈಸೂರು 570009

ದೂರವಾಣಿ 26108
ಕೆ. ಮುರಲೀಧರರಾವ್
1027 ಅನುಗ್ರಹ
ಜಯಲಕ್ಷ್ಮೀವಿಲಾಸ ರಸ್ತೆ
ಚಾಮರಾಜಪುರ
ಮೈಸೂರು 570004

ಈ ಪ್ರಶ್ನೆಗೆ ಉ

(2)

ಗ್ರಹಿಸುವ ನಮ್ಮ ಚರ್ಮ ಬಿಸಿ ಪದಾರ್ಥದ ಕುರಿತು ಮಾಹಿತಿ (ಅಥವಾ ಎಚ್ಚರಿಕೆ) ನೀಡುತ್ತದೆ. ಇಲ್ಲಿ ಚರ್ಮವೇ ನೇತ್ರವಾಗಿ ವರ್ತಿಸುತ್ತದೆ.

ಹಾಗಾದರೆ ಬರ್ಫವೂ ಶಾಖ ತರಂಗಗಳನ್ನು ಬೀರುವುದೇ? ಹೌದು. ಆದರೆ ಚರ್ಮ ಮಾತ್ರ ಇದನ್ನು ಗ್ರಹಿಸಲಾರದು. ಇದಕ್ಕೆ ವಿಶಿಷ್ಟ ಶೋಧಕದ ಕರಣಗಳು ಬೇಕು.

ನೀರು ಗಡ್ಡೆಕಟ್ಟುವ (ಅಂದರೆ ಬರ್ಫದ) ಉಷ್ಣತೆ 0 ಡಿಗ್ರಿ ಸೆಲ್ಸಿಯಸ್ ಎಂದೂ ಕುದಿಯುವ ಉಷ್ಣತೆ 100 ಡಿಗ್ರಿ ಸೆಲ್ಸಿಯಸ್ ಎಂದೂ ಅಂಗೀಕರಿಸಿದ್ದೇವೆ. ಸೈದ್ಧಾಂತಿಕ ಗಣನೆಗಳ ಪ್ರಕಾರ ಉಷ್ಣತೆ 0 ಡಿಗ್ರಿ ಸೆಲ್ಸಿಯಸಿಗಿಂತ ಕೆಳಗೆ ಸುಮಾರು 273 ಡಿಗ್ರಿ ಸೆಲ್ಸಿಯಸಿನ ವರೆಗೂ ಇಳಿಯುವುದು ಸಾಧ್ಯವೆಂದು ತಿಳಿದಿದೆ. ಈ ಪರಮಾಂತಿಮ ನೆಲೆಯಲ್ಲಿ ವಸ್ತುವಿನ ಅಣುಪರಮಾಣುಗಳು ಪೂರ್ತಿ ಚಲನರಹಿತವಾಗಿದ್ದು ಅದರಿಂದ ಯಾವುದೇ ಪ್ರಕಾರದ ವಿಕಿರಣವೂ ಪ್ರಸಾರವಾಗುವುದಿಲ್ಲ. ಎಂದೇ ಈ ನೆಲೆಗೆ ಶುದ್ಧ ಅಥವಾ ನಿರಪೇಕ್ಷ ಶೂನ್ಯವೆಂದು ಹೆಸರು.

ಇದನ್ನು ಪ್ರಾಯೋಗಿಕವಾಗಿ ಪಡೆಯುವುದು ಸಾಧ್ಯವಾಗಿಲ್ಲ. ತೀರ ಸಮೀಪ — ಕೆಲವೇ ದಶಮಾಂಶ ಸ್ಥಾನಗಳ ಅಂತರದ ವರೆಗೂ — ತಲಪಲಾಗಿದೆ. ಸಾಕ್ಷಾತ್ ನಿಸರ್ಗವೇ ಈ 'ಅತಿಕ್ರಮಣ'ವನ್ನು ವಿರೋಧಿಸುವುದೋ ಎಂಬ ಪರಿಸ್ಥಿತಿ. ಸಾಮೀಪ್ಯ ಸರಿ, ಸಾಯುಜ್ಯ ಸಲ್ಲ ಎನ್ನುವಂತಿದೆ ಅದರ ನಡವಳಿಕೆ.

ನಿರಪೇಕ್ಷ ಶೂನ್ಯವನ್ನು ಮೂಲಬಿಂದುವಾಗಿ (ಅಂದರೆ ಸೊನ್ನೆಯಾಗಿ) ಇಟ್ಟು ಉಷ್ಣತೆ ಅಳೆಯುವ ಕ್ರಮಕ್ಕೆ ಕೆಲ್ವಿನ್ ಮಾನಕವೆಂದು ಹೆಸರು. ಇದರ ಪ್ರಕಾರ ಬರ್ಫದ ಉಷ್ಣತೆ 273 ಡಿಗ್ರಿ ಕೆಲ್ವಿನ್, ನೀರಿನ ಕುದಿಯುವ ಉಷ್ಣತೆ 373 ಡಿಗ್ರಿ ಕೆಲ್ವಿನ್ ಇತ್ಯಾದಿ.

ಅತಿರಕ್ತ ವಿಕಿರಣ

ವಿಶ್ವದಲ್ಲಿ ನಕ್ಷತ್ರಗಳ ಜೊತೆಗೆ ಇತರ ವಸ್ತುಗಳೂ ಸಾಕಷ್ಟಿವೆ: ಕಲ್ಲು ಬಂಡೆಗಳು, ಲೋಹ ತುಣುಕುಗಳು, ಬರ್ಫಗಟ್ಟೆಗಳು, ರಜೋಮೇಘಗಳು, ಅಂತರನಾಕ್ಷತ್ರಿಕ ಧೂಳಿಕಣಗಳು ಇತ್ಯಾದಿ. ಆಕಾಶದ ಕಡುಕೋಣೆಯಲ್ಲಿ ಬೇಕಾಬಿಟ್ಟಿ ಅಂಡಲೆಯುತ್ತಿರುವ ಇವುಗಳ ಉಷ್ಣತೆ ನಿರಪೇಕ್ಷ ಶೂನ್ಯದ ಸನಿಹದಲ್ಲಿರುತ್ತದೆ. ಇಂಥ ಒಂದೊಂದು ವಸ್ತುವೂ ವಿಕಿರಣ ಬೀರುತ್ತದೆ. ಆದರೆ ಬೆಳಕನ್ನಲ್ಲ, ರೇಡಿಯೋ ಅಲೆಗಳನ್ನೂ ಅಲ್ಲ, ಬದಲು ಅತಿರಕ್ತ ತರಂಗಗಳನ್ನು — ಮೃದು ಶಾಖವನ್ನು.

ವಿಶ್ವದ ಮೂಲವಸ್ತುವಾದ ನೀಹಾರಿಕೆಯಲ್ಲಿ (ಹೈಡ್ರೊಜನ್ ಮೇಘ) ಅಗಾಧ ಗಾತ್ರದ ಹೈಡ್ರೊಜನ್ ಅನಿಲಗೋಳಗಳು ಮೈದಳೆಯುತ್ತವೆ. ಇದು ನಕ್ಷತ್ರಪೂರ್ವಸ್ಥಿತಿ. ಇಂಥ ಒಂದು ಗೋಳ ತನ್ನ ಭಾರಕ್ಕೆ ತಾನೇ ಮಣಿದು ಕುಸಿಯತೊಡಗುತ್ತದೆ. ಆಗ ಅದರ ಗರ್ಭದಲ್ಲಿ ಸಂಮರ್ದ ಮತ್ತು ಉಷ್ಣ ಸಂಜನಿಸಿ ಪರಮಾಣವಿಕಾಗ್ನಿ ಪ್ರಜ್ವಲಿಸುತ್ತದೆ. ಇದು ನಕ್ಷತ್ರಸ್ಥಿತಿ. ಹಲವು ಕೋಟಿ ವರ್ಷ ಉರಿದ ನಕ್ಷತ್ರ ವಿವಿಧ ಅವಸ್ಥೆಗಳನ್ನು ದಾಟಿ ಕೊನೆಗೆ ಉರುವಲು ಕೊರತೆ ತೀವ್ರವಾಗಿ ಸಿಡಿದೋ ನಂದಿಯೋ ಹರಿಹಂಚಾಗಿ ಹೋಗುತ್ತದೆ. ಇದು ನಕ್ಷತ್ರೋತ್ತರಸ್ಥಿತಿ. ಪೂರ್ವ ಮತ್ತು ಉತ್ತರ ಸ್ಥಿತಿಗಳಲ್ಲಿ ಕಾಯದ ಉಷ್ಣತೆ ನಿರಪೇಕ್ಷ ಶೂನ್ಯದ ಸನಿಹದಲ್ಲಿದ್ದು ಅದರಿಂದ ಅತಿರಕ್ತ ವಿಕಿರಣ ಮಾತ್ರ ಪ್ರಸಾರವಾಗುತ್ತಿರುವುದು. ಒಂದು ಅಂದಾಜಿನ ಪ್ರಕಾರ ವಿಶ್ವದ ಸಮಸ್ತ ವಿಕಿರಣದಲ್ಲಿ ಅತಿರಕ್ತದ ಭಾಗ ಶೇಕಡಾ 50 ಎಂದಿದೆ. ಅಂದಮೇಲೆ ನಕ್ಷ

ಇರಸ್

ಜಿ. ಟಿ. ನಾರಾಯಣರಾವ

ಗಗನದಲ್ಲೊಂದು ಶೀತಲನೇತ್ರ — ಇರಸ್

ಇರಸ್ ಎನ್ನುವುದು Infra-Red Astronomical Satellite ಎಂಬ ಪದಗಳ ಪ್ರಥಮಾಕ್ಷರ ಸಂಕ್ಷೇಪ ರೂಪ. ಅವರಕ್ತ ಖಗೋಳವೈಜ್ಞಾನಿಕ ಉಪಗ್ರಹ ಎಂದರ್ಥ.

ವಿದ್ಯುತ್ಕಾಂತ ರೋಹಿತ

ಗಗನಕಾಯಗಳಿಂದ ನಮ್ಮೆಡೆಗೆ ಬರುವ ಮಾಹಿತಿಯು ವಿವಿಧ ಪ್ರಕಾರಗಳವು: ದೀರ್ಘ ಅಲೆಯುದ್ದ (long wavelength) ವಿಭಾಗದಲ್ಲಿ ರೇಡಿಯೋ ಅಲೆಗಳು, ಶಾಖತರಂಗಗಳು ಇತ್ಯಾದಿ; ದೃಗ್ಗೋಚರ ವಿಭಾಗದಲ್ಲಿ ಬೆಳಕು (ಫೋಟಾನ್ ಕಣಗಳ ರೂಪದಲ್ಲಿ); ಹ್ರಸ್ವ ಅಲೆಯುದ್ದ ವಿಭಾಗದಲ್ಲಿ ಎಕ್ಸ್ ಕಿರಣಗಳು, ಗ್ಯಾಮ ಕಿರಣಗಳು ಇತ್ಯಾದಿ. ಇವುಗಳಿಗೆ ಒಟ್ಟಾಗಿ ವಿದ್ಯುತ್ಕಾಂತ ವಿಕಿರಣವೆಂದು (electromagnetic radiation) ಹೆಸರು. ನಿರ್ದ್ರವ್ಯತೆಯಲ್ಲಿ ಇದರ ವೇಗ ಸೆಕೆಂಡಿಗೆ 3 ಲಕ್ಷ ಕಿಮೀ. ರೂಢಿಯಲ್ಲಿ ಇದನ್ನು ಬೆಳಕಿನ ವೇಗ ಎನ್ನುತ್ತೇವೆ. ಬೆಳಕು 1 ವರ್ಷದಲ್ಲಿ ಗಮಿಸುವ ದೂರಕ್ಕೆ ಜ್ಯೋತಿರ್ವರ್ಷವೆಂದು ಹೆಸರು. ಆಕಾಶದ ಅಸೀಮ ವಿಸ್ತಾರದಲ್ಲಿ ದೂರಮಾಪನೆಗೆ ಬಳಸುವ ಒಂದು ಅಳತೆಗೋಲಿದು.

ವಿದ್ಯುತ್ಕಾಂತ ವಿಕಿರಣದಲ್ಲಿ ಬೆಳಕು ಮಾತ್ರ ನಮ್ಮ ಕಣ್ಣಿಗೆ ಗೋಚರವಾಗುವುದು. ಉಳಿದವನ್ನು ಗ್ರಹಿಸಲು ಯುಕ್ತ ಉಪಕರಣಗಳು ಅಗತ್ಯ. ಹೀಗೆ, ರೇಡಿಯೋ ದೂರದರ್ಶಕ ಆ ಅಲೆಗಳನ್ನು, ಎಕ್ಸ್ ಕಿರಣದೂರದರ್ಶಕ ಆ ಕಿರಣಗಳನ್ನು ಗ್ರಹಿಸಿ ಬಂಧಿಸಿ ಅಧ್ಯಯನಕ್ಕೆ ಸಾಮಗ್ರಿ ಒದಗಿಸುತ್ತವೆ. ವಿಕಿರಣಪ್ರಕಾರ ಯಾವುದೇ ಇರಲಿ ಅದನ್ನು ಗ್ರಹಿಸಲು ಬಳಸುವ ಉಪಕರಣಕ್ಕೆ ಆಲಂಕಾರಿಕವಾಗಿ ನೇತ್ರ ಎನ್ನುವುದುಂಟು.

ಬಿಸಿಲ ಕಂಬಿಯನ್ನು ಅಶ್ರಗದ ಮೂಲಕ ಹಾಯಿಸಿದಾಗ ಏಳು ಬಣ್ಣಗಳ ಪಟ್ಟಿ ದೊರೆಯುವುದು ಸರಿಯಷ್ಟೆ. ನೈಸರ್ಗಿಕ ಕಾಮನಬಿಲ್ಲಿನ ಕೃತಕ ಪ್ರದರ್ಶನವಿದು. ಎಲ್ಲ ಸನ್ನಿವೇಶಗಳಲ್ಲಿ ಬಣ್ಣಗಳ ಅಳವಡಿಕೆಯಲ್ಲಿ ಒಂದು ಕ್ರಮ ಕಾಣುತ್ತೇವೆ: ಕೆಂಪು, ಕಿತ್ತಳೆ, ಹಳದಿ, ಹಸಿರು, ನೀಲಿ, ಗಾಢನೀಲಿ, ನೇರಿಳೆ. ಈ ಪಟ್ಟಿಗೆ ರೋಹಿತವೆಂದು ಹೆಸರು. ಇದು ಬಿಸಿಲಿನ ರುಜು ಅಥವಾ ಬೆರಳಚ್ಚು. ಇದನ್ನು 'ಓದಿ' (ಅಂದರೆ ವೈಜ್ಞಾನಿಕವಾಗಿ ವಿಶ್ಲೇಷಿಸಿ) ಬಿಸಿಲಿನ ಆಕರವಾದ ಸೂರ್ಯನ ರಚನೆ ಬಗ್ಗೆ ಮಾಹಿತಿ ಪಡೆಯಬಹುದು — ರಾಯಭಾರಿಯನ್ನು ಪ್ರಶ್ನಿಸಿ ಆತನ ರಾಜನ ಇಲ್ಲವೇ ರಾಜ್ಯದ ಬಗ್ಗೆ ವಿವರ ಸಂಗ್ರಹಿಸುವಂತೆ.

ರೋಹಿತ ಕೇವಲ ಸಪ್ತವರ್ಣಗಳ ತೋರಣ ಒಂದೇ ಅಲ್ಲ. ಇದರಲ್ಲಿ ಕೆಂಪಿನಿಂದ ಆಚೆಗಿನ ದೀರ್ಘ ಅಲೆಯುದ್ದದ ವಿಭಾಗವೂ ನೇರಿಳೆಯಿಂದ ಆಚೆಗಿನ ಹ್ರಸ್ವ ಅಲೆಯುದ್ದದ ವಿಭಾಗವೂ ಸೇರಿವೆ. ದೀರ್ಘ ಅಲೆಯುದ್ದದ ವಿಭಾಗದಲ್ಲಿ ಶಾಖತರಂಗ ಮತ್ತು ರೇಡಿಯೋ ಅಲೆ ಇವುಗಳ ನಡುವೆ ಇರುವ ಇಕ್ಕಟ್ಟಾದ ಪಟ್ಟಿಗೆ ರೋಹಿತದ ಅವರಕ್ತ ಪ್ರದೇಶವೆಂದು ಹೆಸರು — ಕೆಂಪಿನಿಂದ ಆಚೆಗಿನ (infrared) ಎಂದರ್ಥ. ಶಾಖವಿದ್ದಲ್ಲಿ ಅವರಕ್ತವಿಕಿರಣವಿದೆ.

ನಿರಪೇಕ್ಷ ಶೂನ್ಯ, ಚಲನರಾಹಿತ್ಯ

ಪ್ರತಿಯೊಂದು ವಸ್ತುವೂ ವಿದ್ಯುತ್ಕಾಂತ ವಿಕಿರಣದ ಕೆಲವಾದರೂ ಪ್ರಕಾರಗಳನ್ನು ಪ್ರಸರಿಸುತ್ತದೆ. ನೀವು ಓದುತ್ತಿರುವ ಈ ಪುಟ ಬೆಳಕನ್ನು (ಪ್ರತಿಫಲಿಸುವ ಮೂಲಕ ಆದರೂ) ಪ್ರಸರಿಸುತ್ತಿರುವುದರಿಂದ ನಿಮ್ಮ ಕಣ್ಣುಗಳು ಅಕ್ಷರಗಳನ್ನು ಗುರುತಿಸುತ್ತವೆ. ಬಿಸಿ ಪದಾರ್ಥದಿಂದ ಶಾಖತರಂಗಗಳು ಹೊಮ್ಮುತ್ತವೆ. ಅದನ್ನು ಕತ್ತಲೆ ಕೋಣೆಯಲ್ಲಿಟ್ಟರೂ ಈ ತರಂಗಗಳನ್ನು

③

ತ್ರಗಳ [illegible] ತಿಳಿದು ವಿಶ್ವದ ನಿಜ ಚಿತ್ರ ಅರಿಯಲು ಅತಿರಕ್ತ ವಿಭಾಗದ ಅಧ್ಯಯನ ಎಷ್ಟು ಅಗತ್ಯ ಮತ್ತು ಅನಿವಾರ್ಯ ಎಂಬುದು ಸ್ಪಷ್ಟ.

ವಾಸ್ತವವಾಗಿ ಅತಿರಕ್ತ ವಿಕಿರಣವನ್ನು ಪ್ರಸರಿಸದ ಆಕಾಶಕಾಯವೇ ಇಲ್ಲ. ಕಾವಿನ ಮೂಲಗಳಾವುವು. ಕಾವುಶೂನ್ಯ, ಅಂದರೆ ನಿರಪೇಕ್ಷ ಶೂನ್ಯದಲ್ಲಿರುವ ವಸ್ತುವೇ ವಿಶ್ವದಲ್ಲಿಲ್ಲ. ಎಂದೇ ವಿಶ್ವದ ಸರ್ವಮಾನ್ಯ ಭಾಷೆ ಅತಿರಕ್ತ ವಿಕಿರಣ ಎನ್ನುವುದುಂಟು. ಇದರ ಪ್ರದೇಶದಲ್ಲಿ ಹೊಂದಿಸಿಕೊಳ್ಳುವುದೊಂದೇ ಈ ಭಾಷೆಯನ್ನು ಅರ್ಥವಿಸಿ ಬ್ರಹ್ಮಾಂಡದಲ್ಲಿರುವ ಕಾಯಗಳ ಸ್ಥಿತಿಗತಿ ಅರಿಯಲು ಇರುವ ದಾರಿ.

ಅತಿರಕ್ತ ವಿಕಿರಣ ಕೂಡ ಬೆಳಕಿನ ವೇಗದಿಂದ ಅಲೆಗಳಾಗಿ ಧಾವಿಸುತ್ತದೆ. ಆದರೆ ಬೆಳಕಿನ ಕಣಗಳಿಗೆ (ಫೋಟಾನುಗಳು) ಎದುರಾಗುವ ಹಾದಿ ನಡುವಿನ ಅಡ್ಡ ಅಡಚಣೆಗಳು ಅಸಂಖ್ಯಾತ. ಉದಾಹರಣೆಗೆ ನಮ್ಮ ಸೂರ್ಯ ಸದೃಶ ನಕ್ಷತ್ರವಾಗಿರುವ ಆಕಾಶಗಂಗೆಯ ಕೇಂದ್ರದಲ್ಲಿ ಉದ್ಭವವಾಗುವ ಪ್ರತಿ 1000 ಕೋಟಿ ಫೋಟಾನುಗಳ ಪೈಕಿ 1 ಫೋಟಾನ್ ಮಾತ್ರ ಭೂಮಿಯನ್ನು ತಲುಪುತ್ತದೆ. (ಭೂಮಿ-ಆಕಾಶಗಂಗೆ ಕೇಂದ್ರ ಅಂತರ ಸುಮಾರು 40 ಸಾವಿರ ಜ್ಯೋತಿರ್ವರ್ಷ. ವಿಶ್ವದಲ್ಲಿ ಇದೇನೂ ಮಹಾದೂರ ಅಲ್ಲ.) ಉಳಿದವನ್ನು ಅಂತರನಾಕ್ಷತ್ರಿಕ ರಜಃಕಣಗಳು ಹೀರಿಕೊಂಡು ಅತಿರಕ್ತ ವಿಕಿರಣವಾಗಿ ಪುನಃಪ್ರಸರಿಸುತ್ತವೆ.

ಆಕಾಶದ ಅಖಂಡ ವಿಸ್ತಾರದಲ್ಲಿ ಅತಿರಕ್ತ ವಿಕಿರಣ ಮಾತ್ರ ಯಾವ ಅಡೆತಡೆಯೂ ಇಲ್ಲದೆ ಧಾವಿಸುತ್ತದೆ. ಹೀಗೆ ಶತ, ಸಹಸ್ರ, ಲಕ್ಷ, ಕೋಟಿ ಅಥವಾ ಇನ್ನೂ ಹೆಚ್ಚು ಜ್ಯೋತಿರ್ವರ್ಷ ದೂರಗಳನ್ನು ಲೀಲಾಜಾಲವಾಗಿ ಅಕ್ರಮಿಸಿ ಬರುವ ಈ ವಿಕಿರಣ ನಮ್ಮ ವಾಯುಮಂಡಲದ ಹೊರವಲಯದಲ್ಲಿ ~~ಸ್ಥ~~ ಸ್ಥಗಿತವಾಗುತ್ತದೆ. ಕಾರಣ, ವಾಯುಮಂಡಲ ಇದಕ್ಕೆ ಅಪಾರದರ್ಶಕ. (ಎಕ್ಸ್‌ಕಿರಣ ಮೊದಲಾದ ಹ್ರಸ್ವ ಅಲೆಯುದ್ದದ ಪ್ರಕಾರಗಳೂ ವಾಯುಮಂಡಲ ಅಪಾರದರ್ಶಕ.) ಹೀಗೆ, ಬರಿಗಣ್ಣಿಗೆ ನಾವು ನೋಡುವ ತೆರ ವಿಶ್ವದ ಅಧಿಕ ಭಾಗ ಕುರಿತಂತೆ ಅಂಧತ್ವ. ವಾಯುಮಂಡಲ ಸೋಸಿ ಒಳಬಿಡುವ ವಿಕಿರಣ ಪ್ರಕಾರಗಳು ಮಾತ್ರ — ಅದೂ ಅವು ಬರುವ ವಿಕೃತರೂಪಗಳಲ್ಲಿ ನಮಗೆ ವಿಶ್ವದ ಬಗ್ಗೆ ಮಾಹಿತಿ ನೀಡುವ ಸಂದೇಶವಾಹಕಗಳು.

ವಾಯುಮಂಡಲದ ಒಳಗೆ ಸಂಚಲಿಸುವ ಉಷ್ಣದ ಕಾರಣವಾಗಿ ಇದಕ್ಕೆ ಉಷ್ಣತೆ ಒದಗುತ್ತದೆ. ಇದರ ಸನಿಹದಲ್ಲಿ ಅತಿರಕ್ತದ ಅತಿಶೀತಲ ವಿಕಿರಣ ಮಸುಳಿಹೋಗುತ್ತದೆ — ಮಾರುಕಟ್ಟೆಯ ಗುಲ್ಲು ಗಲಭೆಯಲ್ಲಿ ಸಂಗೀತದ ಸರಿಗಮ ನಶಿಸಿ ಹೋಗುವಂತೆ. ಹೀಗಾಗಿ ವಾಯುಮಂಡಲದ ತಳದಲ್ಲಿರುವ ನಮಗಾಗಲಿ ನಮ್ಮ ಉಪಕರಣಗಳಿಗಾಗಲಿ ವಿಶ್ವದ ಅತಿರಕ್ತ ವಿಕಿರಣ ಸಂದೇಶ ಲಭ್ಯವಾಗದು. ಅಂದಮೇಲೆ ಇಲ್ಲಿಯ ಉಷ್ಣಗಲಭೆಯಿಂದ ಪಾರಾಗಿ ಹೋಗುವುದೊಂದೇ ಅತಿರಕ್ತದ 'ಮಧುರವಾಣಿ' ಆಲಿಸಲು ಇರುವ ಉಪಾಯ.

<u>ಇರಾಸ್ ಶೀತಲನೇತ್ರದ ಪಾತ್ರ</u>

ಈ ಉದ್ದೇಶದ ಈಡೇರಿಕೆಗೆಂದು ನಿಯೋಜಿತವಾದದ್ದೇ ಇರಾಸ್. ವಾಯುಮಂಡಲಾತೀತ ಆಕಾಶದಲ್ಲಿ ಭೂಮಿಯನ್ನು ಪರಿಭ್ರಮಿಸುತ್ತ ವಿಶ್ವದ ವಿವಿಧ ಭಾಗಗಳಿಂದ ಬರುವ ಅತಿರಕ್ತ ವಿಕಿರಣವನ್ನು ಸಂಗ್ರಹಿಸಿ ಬಿಂಬಿಸುವ ಮಾನವಕೃತ ಉಪಕರಣವೇ ಇರಾಸ್. ಆಕಾಶದ ಅತಿರಕ್ತ ಪಟ ತಯಾರಿಸಲು ವಿಜ್ಞಾ

(4)

ಗಳಿಗೆ ~~ಅತಿರಕ್ತ~~ ವಿಕಿರಣಗ್ರಾಹಕಗಳ ಬಗ್ಗೆ ಮಾಹಿತಿ ಒದಗಿಸಬಲ್ಲ ನೇತ್ರವೇ ಇರಸ್. ಭೂಮಿಬಂಧಿತ ಮಾನವ ಧೃತರಾಷ್ಟ್ರನಿಗೆ ವಿಶ್ವಕ್ಷೇತ್ರದ ಅತಿರಕ್ತದರ್ಶನ ಮಾಡಿಸಬಲ್ಲ ಸಂಜಯನೇ ಇರಸ್.

ಯಾವುದೇ ಮಾಪನೆಯಲ್ಲಿ ನಾವು ಅನುಸರಿಸುವ ಸುಲಭ ನಿಯಮವೊಂದುಂಟು: ಮಾಪನವಸ್ತುವಿಗಿಂತ ಮಾಪಕ ಕಿರಿಯದು. ಉದಾಹರಣೆಗೆ ವ್ಯಕ್ತಿಯ ತೂಕ 65 ಕೆ.ಜಿ ಎನ್ನುವಲ್ಲಿ ವ್ಯಕ್ತಿ ಮಾಪನವಸ್ತು, ಕೆ.ಜಿ ಮಾಪಕ. ಮಾಪನವಸ್ತುವಿನ ಗುಣಧರ್ಮ ಅವಲಂಬಿಸಿ ಮಾಪಕವನ್ನು ಆಯುತ್ತೇವೆ. ಎಂದೇ ಉಡುಪಿನ ವಸನದ ಉದ್ದವನ್ನು ಸೆಂಟಿಮೀಟರುಗಳಲ್ಲಿಯೂ ಆಕಾಶದಲ್ಲಿಯ ಅಗಾಧ ದೂರಗಳನ್ನು ಜ್ಯೋತಿರ್ವರ್ಷಗಳಲ್ಲಿಯೂ ಅಳೆಯುವುದಾಗಿದೆ. ವಿಪರ್ಯಯವಾಗಿ ಅಳೆಯಲು ಪ್ರಯತ್ನಿಸಿ ನೋಡಿ: ಭೂಮಿ-ಸೂರ್ಯ ಅಂತರ ಎಷ್ಟು ಸೆಂಟಿಮೀಟರ್? ನನಗೆ ಜುಬ್ಬ ಹೊಲಿಯಲು ಬೇಕಾಗುವ ಬಟ್ಟೆಯ ಉದ್ದ ಎಷ್ಟು ಜ್ಯೋತಿರ್ವರ್ಷ? ಉತ್ತರಗಳೇನೋ ಇವೆ. ಆದರೆ ಅವು ಅವ್ಯವಹಾರಿಕ.

ಕೊಠಡಿ ಉಷ್ಣತೆಯಲ್ಲಿರುವ ದೂರದರ್ಶಕದಿಂದ ಪ್ರಸಾರವಾಗುವ ಅತಿರಕ್ತ ವಿಕಿರಣ ವಿಶ್ವದ ಪ್ರಬಲತಮ ಅತಿರಕ್ತಾಕರದಿಂದ ಬರುವ ವಿಕಿರಣದ ಕೋಟಿ ಮಡಿ ಇರುವುದು. ಅತಿರಕ್ತ ಮೂಲಗಳು ಎಷ್ಟು ಶೀತಲವಾಗಿರುವುವೆಂಬುದಕ್ಕೆ ಇದೊಂದು ನಿದರ್ಶನ. ಎಂದೇ ಈ ಶೀತಲವಿಕಿರಣಮಾಪನೆಗೆ ಇದಕ್ಕಿಂತಲೂ ಶೀತಲಸ್ಥಿತಿಯಲ್ಲಿದ್ದು ವಾಯುಮಂಡಲದ ಹೊರಗಿನಿಂದ ವಿಶ್ವವನ್ನು ಪರೀಕ್ಷಿಸಬಲ್ಲ ಉಪಕರಣ ಅಗತ್ಯ. ಈ ಆವಶ್ಯಕತೆಯನ್ನು ಪೂರೈಸುವ ಶೀತಲನೇತ್ರವೇ ಇರಸ್.

<u>ಶೀತಲೀಕರಣದ ಸಮಸ್ಯೆ</u>

ಅಮೆರಿಕ, ದಿ ನೆದರ್ಲೆಂಡ್ಸ್ ಮತ್ತು ಇಂಗ್ಲೆಂಡ್ ದೇಶಗಳ ಸಂಯುಕ್ತ ಪ್ರಯತ್ನದ ಫಲ ಇರಸ್. ಇದರ ಆಲೇಖ್ಯ ಮತ್ತು ರಚನೆಯಲ್ಲಿ ಎದುರಾದ ತಾಂತ್ರಿಕ ಸಮಸ್ಯೆಗಳು ಮಾನವನನ್ನು ಚಂದ್ರನ ಮೇಲೆ ಮೆತ್ತಗೆ ಇಳಿಸಿ ಭೂಮಿಗೆ ಬರಮಾಡಿಕೊಳ್ಳುವ ಸಾಹಸ ನಿರ್ವಹಣೆಯಲ್ಲಿ ಎದುರಾದವುಗಳಿಗಿಂತ ಅಧಿಕ. ಮುಖ್ಯವಾಗಿ ಇರಸಿನ ಗ್ರಾಹಕಾಂಗ (ಅತಿರಕ್ತ ವಿಕಿರಣಕ್ಕೆ ಸಂವೇದಿಯಾಗಿರುವ ಶೀತಲನೇತ್ರ) 2.5 ಡಿಗ್ರಿ ಕೆಲ್ವಿನ್ ಉಷ್ಣತೆಯ ಸನಿಹದಲ್ಲಿರುವಂತೆ ಕಾಪಾಡಿಸುವುದು ಹೇಗೆ?

ವಾಯುಮಂಡಲದ ಘಟಕ ಅನಿಲಗಳ ಪೈಕಿ ಹೀಲಿಯಮ್ ~~[illegible]~~ ಒಂದು. ಸಾಧಾರಣ ರಾಸಾಯನಿಕ ಕ್ರಿಯೆಗಳಲ್ಲಿ ಇದರ ಪಾತ್ರ ದಿವ್ಯ ಶೂನ್ಯ, ಔದಾಸೀನ್ಯ! ಈ ಕಾರಣದಿಂದ ಇದಕ್ಕೆ ಜಡಾನಿಲವೆಂಬ ಹೆಸರು ಬಂದಿದೆ. ಎಂಥ ಜಡತ್ರಾಗಿಯನ್ನು ಎಷ್ಟರ ಅಳ್ಳ ಎನ್ನುವ ಉತ್ತೇಜಿತ ಸ್ಥಿತಿಗೆ ಎಬ್ಬಿಸಬಲ್ಲ ಸನ್ನಿವೇಶಗಳು ಇದ್ದೇ ಇವೆ. ಹೀಲಿಯಮಿಗೆ ಈ ಸ್ಥಿತಿ ನಿರಪೇಕ್ಷ ಶೂನ್ಯದ ಸನಿಹದಲ್ಲಿದೆಯೆಂದು ತಿಳಿದುಬಂತು. ಅಲ್ಲಿ ಅದು ತನ್ನ ಜಡತ್ವದ ಮುಸುಕು ತೆಗೆದುಹಾಕಿ ಪಟುತ್ವ ಪಡೆಯುತ್ತದೆ. 5 ಡಿಗ್ರಿ ಕೆಲ್ವಿನ್ನಿಗಿಂತಲೂ ಕಡಿಮೆ ಉಷ್ಣತೆಯಲ್ಲಿ ದ್ರವ ಹೀಲಿಯಮ್ ಶುದ್ಧ ಅನಿಲಸ್ಥಿತಿಗೆ ಬರುತ್ತದೆ. ಉಷ್ಣತೆಯು ಮಾಪಕದಲ್ಲಿ ಆ ಪಾತಾಳ ತಲುಪುವುದು ಸಾಧಾರಣ ಸಾಹಸವೇನೂ ಅಲ್ಲ. 1908ರಲ್ಲಿ ದ್ರವ ಹೀಲಿಯಮನ್ನು 1926ರಲ್ಲಿ ಘನ ಹೀಲಿಯಮನ್ನು ಪ್ರಾಯೋಗಿಕವಾಗಿ ಪಡೆಯುವಂತೆ ಸಾಧಿಸಿದಾಗ ವಿಜ್ಞಾನದಲ್ಲಿ ನೂತನ ಕ್ಷೇತ್ರವೊಂದು ಅನಾವರಣಗೊಂಡಿತು: ಅತಿಶೀತವಿಜ್ಞಾನ (cryogenics). ನಿರಪೇಕ್ಷ ಶೂನ್ಯದ ವಲಯದಲ್ಲಿ ವಸ್ತುಗಳ ವರ್ತನೆ

ಇಲ್ಲಿಯೂ ಅಧ್ಯಯನ ವಸ್ತು.

ಬಿಸಿಲಿನಲ್ಲಿ ತಿರುಗಾಡುವಾಗ ತಣ್ಣೀರ ಮೀಹ ಹಿತಕರ. ಜ್ವರದ ತಾಪ ಏರಿದಾಗ ಬರ್ಫ ಲೇಪನ ಶಾಮಕ. ಇಲ್ಲಿ ನಡೆಯುವ ಕ್ರಿಯೆ ಏನು? ನೀರು ಅಥವಾ ಬರ್ಫ ದೇಹದಿಂದ ಉಷ್ಣ ಹೀರಿ ದೇಹೋಷ್ಣತೆಯನ್ನು ತಗ್ಗಿಸುತ್ತವೆ. ಇರಾಸ್‌ನ ಶೀತಲ ನೇತ್ರದ 'ಧಗೆ' ಅಥವಾ 'ತಾಪ' ಇಳಿಸುವಲ್ಲಿ ದ್ರವ ಹೀಲಿಯಮ್ ನಿರ್ವಹಿಸುವ ಪಾತ್ರ ಇದೇ. ಉತ್ಸರ್ಗದಿಂದ ಇದು ಉಷ್ಣ ಹೀರಿ ಅದನ್ನು ತಗ್ಗಿಸುತ್ತದೆ; ಅದೇ ವೇಳೆ ದ್ರವಹೀಲಿಯಮ್ ಕುದ್ದು ಅನಿಲವಾಗಿ ಹೊರಹೋಗುತ್ತದೆ.

ಇರಾಸ್‌ನ ನಿಯೋಗಾವಧಿ 11 ತಿಂಗಳು ಮಾತ್ರ. ಇದನ್ನು 1983 ಜನವರಿ 26ರಂದು ಕಕ್ಷೆಗೆ ಕಳುಹಲಾಯಿತು. ಭೂಮಿಯ ಸುತ್ತ ಇದು 900 ಕಿ.ಮೀ. ಎತ್ತರದಲ್ಲಿ ಸ್ಥೂಲವಾಗಿ 'ಉತ್ತರ ಧ್ರುವದಿಂದ ದಕ್ಷಿಣ ಧ್ರುವಕ್ಕೆ' ಪರಿಭ್ರಮಿಸುತ್ತದೆ. ಇದರ ಶೀತಲ ನೇತ್ರ ವಿಶ್ವದ ಅವರಕ್ತ ದೃಶ್ಯವನ್ನು ನೋಡಿ ವರದಿ ಮಾಡುತ್ತದೆ: ದಿನವೊಂದರ 70 ಕೋಟಿ ಮಾಹಿತಿ ತುಣುಕುಗಳು. ನಕ್ಷತ್ರಜನನ, ಗ್ರಹವಲಯದ ಅಸ್ತಿತ್ವ, ನಾಶವಾದ ನಕ್ಷತ್ರಗಳ ವರ್ತಮಾನ ಸ್ಥಿತಿ, ಧೂಮಕೇತುಗಳ ವಿಚಿತ್ರ ಚಿತ್ರ, ಅಂತರ್ನಾಕ್ಷತ್ರಿಕ ರಜೋಮೇಘ ಮುಂತಾದ ಶೀತಲ ದೃಶ್ಯಗಳೆಲ್ಲವೂ ಈ ಅತೀಂದ್ರಿಯ ದೃಷ್ಟಿಗೆ ಗೋಚರವಾಗುತ್ತವೆ.

ಇದರ ಆಯುಷ್ಯ ಒಂದು ವರ್ಷ ಎಂದು ನಿರ್ಧರಿಸಲಾಗಿತ್ತು. ಅಂದರೆ ಅಷ್ಟು ಕಾಲ ಇದು ಆಂತರಿಕ ಹಾಗೂ ಬಾಹ್ಯ ಉಷ್ಣದಿಂದ ಬಾಧಿತವಾಗದೆ ಇದರ ಉಷ್ಣತೆ ಅತಿಶೀತ ಮಿತಿಗಳಲ್ಲಿರುವಂತೆ ಇದಕ್ಕೆ ದ್ರವಹೀಲಿಯಮ್ ಕವಚವನ್ನು ತೊಡಿಸಲಾಗಿತ್ತು. ಆದರೆ 1983 ಡಿಸೆಂಬರ್ ಸುಮಾರಿಗೆ ನೇತ್ರದ ಕ್ರಿಯೆ ಹಠಾತ್ತಾಗಿ ಸ್ತಬ್ಧವಾಯಿತು. ಈ ಅವಧಿಪೂರ್ವ ಅಂತ್ಯ ಪ್ರಾಪ್ತಿಯ ಪರಿಣಾಮವಾಗಿ ಆಕಾಶದ ಅವರಕ್ತ ಸರ್ವೇಕ್ಷಣೆ ಶೇಕಡಾ 95ಕ್ಕೆ ನಿಂತಿದೆ. ಇಷ್ಟರಲ್ಲಿ 2 ಲಕ್ಷ ಅವರಕ್ತಾಕರಗಳು ಪತ್ತೆ ಆಗಿವೆ. ಈಗ ಸಂಗ್ರಹವಾಗಿರುವ ಮಾಹಿತಿಗಳು ಮುಂದಿನ ಹಲವು ವರ್ಷ ಕಾಲ ವಿಜ್ಞಾನಿಗಳಿಗೂ ಗಣಕಗಳಿಗೂ ವಿಪುಳ ಗ್ರಾಸ ಒದಗಿಸುತ್ತಿರುವುವು.

<u>ಇರಾಸ್ ಕಂಡ ವಿಶ್ವ</u>

ಸದ್ಯ ಪ್ರಕಟವಾಗಿರುವ ವರದಿ ಮುಖ್ಯ ಫಲಿತಾಂಶಗಳು ರೋಮಾಂಚಕಾರಿಯಾಗಿವೆ.

ಒಂದು. 5 ಹೊಸ ಧೂಮಕೇತುಗಳು, 4 ಹೊಸ ಕ್ಷುದ್ರಗ್ರಹಗಳು, ಬಾನ ತಿರುಕುಳಿಗಳ ದಂಡು ಇವೆಲ್ಲವೂ ಶೀತಲನೇತ್ರದ ಬಲೆಯೊಳಗೆ ಬಂದಿವೆ. ಆಕಾಶದ ಅಧಿಕಾಂಶ ನಿರ್ದ್ರವ್ಯ (ಅಂದರೆ ವಸ್ತುರಹಿತ) ಎಂಬ ಪ್ರಚಲಿತ ಭಾವನೆಯನ್ನು ಇರಾಸ್ ಪ್ರಶ್ನಿಸಿದೆ. ಇದರ ಪ್ರಕಾರ ಆಕಾಶದಲ್ಲಿ ಸಾಕಷ್ಟು ರದ್ದಿ ಕಸ [illegible]. ಈ ದಿಶೆಯಲ್ಲಿ ಹೆಚ್ಚಿನ ವಿವರಗಳು ಪ್ರಕಟವಾದಂತೆ ನಾಕ್ಷತ್ರಿಕ ಮಾದರಿಗಳನ್ನು ಪುನಃ ಪರಿಶೀಲನೆಗೆ ಒಳಪಡಿಸುವುದು ಅಗತ್ಯವಾದೀತು.

ಎರಡು. ಅಭಿಜಿತ್ (Vega) ಮತ್ತು ಮೀನಾಕ್ಷಿ (Fomalhaut) ಎಂಬ ನಕ್ಷತ್ರಗಳನ್ನು ಘನವಸ್ತುಗಳ (ನಕ್ಷತ್ರವಲ್ಲದ ಎಂಬ ಅರ್ಥದಲ್ಲಿ) ಪರಿವಾರ ಪರಿವೇಷ್ಟಿಸಿಕೊಂಡಿರುವುದು ಪತ್ತೆಯಾಗಿದೆ. ಅಭಿಜಿತ್ತಿನ ಪರಿವಾರ ಅದರಿಂದ 80 ಖಗೋಲಮಾನ (1 ಖಮಾ = ಸೂರ್ಯ-ಭೂಮಿ ಸರಾಸರಿ ಅಂತರ = 14,88,00,000 ಕಿ.ಮೀ.) ದೂರದಲ್ಲಿಯೂ ಮೀನಾಕ್ಷಿಯ ಪರಿವಾರ ಅದರಿಂದ 100 ಖಮಾ ದೂರದಲ್ಲಿಯೂ ಇವೆ.

ಅಂದ ಹಾಗೆ, ಉಜ್ಜ್ವಲತೆಯ ಮಾನಕದಲ್ಲಿ ಲುಬ್ಧಕಕ್ಕೆ (Sirius)

ಮೊದಲ ಮಗ್ನೆ, ಅಭಿಜಿತ್ತಿಗೆ ಏದನೆಯದು, ಮೀನಾಕ್ಷಿಗೆ ಹದಿನೆಂಟನೆಯದು. ಭೂಮಿಯಿಂದ ಇವುಗಳ ದೂರ ಅನುಕ್ರಮವಾಗಿ 8.7, 27, 23 ಜ್ಯೋತಿರ್ವರ್ಷಗಳು.

ನಕ್ಷತ್ರವೊಂದನ್ನು ಘನವಸ್ತು ಪರಿವೇಷ್ಟಿಸಿಕೊಂಡಿದೆ ಎಂಬ ಸುದ್ದಿ ವಿಜ್ಞಾನಿಗಳಲ್ಲಿ ವಿಶೇಷ ಸಂಭ್ರಮ ಕುತೂಹಲಗಳಿಗೆ ಕಾರಣವಾಗಿದೆ. ಗ್ರಹವಲಯ ರೂಪುಗೊಳ್ಳುತ್ತಿರುವುದರ ಲಕ್ಷಣವಿದೆಂದು ಅವರ ತರ್ಕ. ನೀಹಾರಿಕೆಯಿಂದ ಬೃಹದ್ ವಿಲಗೋಳವಾಗಿ ಆದಿಮ ನಕ್ಷತ್ರ ಮೈದಳೆಯುವಾಗಲೇ ಚೂರುಪಾರು ಅವಶೇಷಗಳು ಇದರ ಸುತ್ತ ವಿವಿಧ ದೂರಗಳಲ್ಲಿ ಎರಚಿಹೋಗಿರುತ್ತವೆ. ಕೇಂದ್ರಗೋಳ ತನ್ನ ಅಗಾಧ ರಾಶಿಯ ಕಾರಣವಾಗಿ ಕ್ರಮೇಣ ನಕ್ಷತ್ರತ್ವ ಪಡೆಯುತ್ತದೆ. ಆಗ ಈ ಚೂರುಪಾರುಗಳು ಇದರ ಗುರುತ್ವಕ್ಷೇತ್ರದಲ್ಲಿ ಇದನ್ನು ಪರಿಭ್ರಮಿಸುವ ಘನಕಾಯಗಳಾಗಿ ಉಳಿದಿರುತ್ತವೆ. ಸಂಚಯನವಾದವೆಂಬ ಹೆಸರಿನ ಈ ಚಿಂತನೆಗೆ ಇಲ್ಲಿಯ ತನಕ ಸೌರವ್ಯೂಹದ ಹೊರತು ಬೇರೆಲ್ಲಿಯೂ ಪುರಾವೆ ದೊರೆತಿರಲಿಲ್ಲ. ಯಾವುದೇ ನಕ್ಷತ್ರಕ್ಕೆ ನಮ್ಮ ಸೂರ್ಯನಂತೆ ಗ್ರಹವಲಯ ಇದ್ದರೂ ಅದನ್ನು ಆ ನಕ್ಷತ್ರದ ಪ್ರಭೆ ಮತ್ತು ಗಾತ್ರ ಇವುಗಳಿಂದ ಪ್ರತ್ಯೇಕಿಸಿ ಗುರುತಿಸಬಲ್ಲ ತಂತ್ರ ಕರಗತವಾಗಿರದಿದ್ದುದೇ ಕಾರಣ. ಉದಾಹರಣೆಗೆ, ಸೌರವ್ಯೂಹದಲ್ಲಿ ಇದರ ಸಕಲ 99%ಕ್ಕಿಂತಲೂ ಅಧಿಕ ರಾಶಿ ಸೂರ್ಯನಲ್ಲೇ ಕೇಂದ್ರೀಕೃತವಾಗಿದೆ. ಹೀಗಿರುವಾಗ ಅತಿ ದೂರದ ಅನ್ಯ ನಕ್ಷತ್ರವೊಂದರ ಗ್ರಹದಲ್ಲಿ ಕುಳಿತಿರಬಹುದಾದ ಜೀವಿ ~~ಭೂಮಿ, ಗುರು~~ ಹೇಗೆ ತಾನೇ ಭೂಮಿ, ಗುರು ಮುಂತಾದ ಗ್ರಹಗಳನ್ನು ಸೂರ್ಯನಿಂದ ಭಿನ್ನವಾಗಿ ಗುರುತಿಸೀತು? ಅತಿರಕ್ತ ವೀಕ್ಷಣೆ ಈ ಸಮಸ್ಯೆಗೆ ಪರಿಹಾರ ಒದಗಿಸಿದೆ: ಘನವಸ್ತುಗಳಿಂದ ಪ್ರಸಾರವಾಗುವ ಅತಿರಕ್ತ ವಿಕಿರಣವನ್ನು ನಿಚ್ಚಳವಾಗಿ ಕಾಣಲು ಸಾಧ್ಯವಾಗಿರುವುದೇ ಇಲ್ಲಿಯ ಸ್ವಾರಸ್ಯ. ಇದೊಂದು ಬಗೆಯ ದಿವ್ಯದೃಷ್ಟಿ!

ಅಭಿಜಿತ ಮತ್ತು ಮೀನಾಕ್ಷಿ ನಕ್ಷತ್ರಗಳ ಅಧ್ಯಯನದಿಂದ ಉತ್ತೇಜಿತರಾದ ವಿಜ್ಞಾನಿಗಳು ಸುಮಾರು 9000 ನಕ್ಷತ್ರಗಳನ್ನು ಗ್ರಹಸಂಸಾರಗಳ ಇರವಿಗಾಗಿ ಶೋಧಿಸಿದರು. ಈ ಪೈಕಿ 50 ಗಟ್ಟಿ ಕುಳಗಳನ್ನು ಹೆಚ್ಚಿನ ತಪಾಸಣೆಗಾಗಿ ಹೆಕ್ಕಲಾಗಿದೆ. ಇವನ್ನು ಪತ್ತೆಹಚ್ಚಿದ ಮಾಹಿತಿಗಳ ಪ್ರಾಗಧ್ಯಯನ ಮುಗಿಯುವ ವೇಳೆಗೆ, ಮುಂದಿನ ಕೆಲವು ವರ್ಷಗಳಲ್ಲಿ, ನವದಿಗಂತಗಳು ಅನಾವರಣಗೊಳ್ಳುವುದು ಖಾತ್ರಿ. 1990ರ ಅಂದಾಜಿಗೆ ಉಡಾಯಿಸಲು ಉದ್ದೇಶಿಸಿರುವ ಅಧಿಕ ಪರಿಷ್ಕೃತ ಅತಿರಕ್ತ ನೇತ್ರ ಬಿತ್ತರಿಸಲಿರುವ ವಿಶ್ವರೂಪವೈಭವವನ್ನು ನೋಡಲು ವಿಜ್ಞಾನಿಗಳು ತವಕದಿಂದಿದ್ದಾರೆ.

ಚಿತ್ರಕೃಪೆ: ಅಮೆರಿಕನ್ ಸೆಂಟರ್ ಲೈಬ್ರರಿ
ಮದ್ರಾಸು

5.5.1984

ಜಿ.ಟಿ. ನಾರಾಯಣರಾವ್
ಅತ್ರಿ ಎಂಟನೆಯ ಅಡ್ಡರಸ್ತೆ,
ಸರಸ್ವತಿಪುರ ಮೈಸೂರು 570009
ದೂರವಾಣಿ 25759

ಜಿ. ಟಿ. ನಾರಾಯಣರಾವ್

ವಿಶ್ವಕೋಶ ದೇಜಗೌ ಮತ್ತು ನಾನು

ಎಂದಿನಂತೆ ಸಾಯಂಕಾಲ ಹೊತ್ತಿಗೆ ಮರಳಿದೆ. ಸಹೋದ್ಯೋಗಿ ಮಿತ್ರರು ವಿಶೇಷ ಉತ್ಸುಕತೆಯಿಂದ ನನ್ನ ಬರವನ್ನು ಪ್ರತೀಕ್ಷಿಸುತ್ತಿದ್ದಂತೆ ಭಾಸವಾಯಿತು. "ದೇಜಗೌ ನಿಮ್ಮನ್ನು ನೋಡಲು ಬಂದಿದ್ದರು. ಸೆಂಟ್ರಲ್ ಕಾಲೇಜ್ ಗ್ರಂಥಾಲಯದಲ್ಲಿ ಕಾಯುತ್ತಿರುವರಂತೆ. ನೀವು ಒಡನೆ ಹೋಗಿ ಅವರನ್ನು ಭೇಟಿಮಾಡಬೇಕಂತೆ. ಏನು ಸಮಾಚಾರ?"

ನನಗೂ ಅವರಷ್ಟೇ ಆಶ್ಚರ್ಯ. ನಾವು ಪರಸ್ಪರ ಪರಿಚಿತರಲ್ಲ. ನಮ್ಮ ನಡುವೆ ಸಾಮಾನ್ಯ ಆಸಕ್ತಿ ಏನೂ ಇರಲಿಲ್ಲ. ಕಾಲೇಜಿನ ಒಬ್ಬ ಅನಾಮಿಕ ಲೆಕ್ಚರರ್ ಆಗಿದ್ದ ನನ್ನಿಂದ ನಾಡಿನ ಒಬ್ಬ ಗಣ್ಯ ಪ್ರಾಧ್ಯಾಪಕ ಹಾಗೂ ಕನ್ನಡ ಸೇನಾನಿ ಆಗಿದ್ದ ಅವರಿಗೆ ಏನೂ ಆಗಬೇಕಾಗಿರಲಿಲ್ಲ. ಅವರನ್ನು ನಾನು ಸಭೆ ಸಮಾರಂಭಗಳಲ್ಲಿ ನೋಡಿದ್ದೆನಾದರೂ ~~ಮತ್ತು~~ ಅವರ ಕೆಲವು ಬರಹಗಳನ್ನು ಓದಿದ್ದೆನಾದರೂ ನನ್ನನ್ನು ಕುರಿತಂತೆ ಅವರಿಗೆ ಇಂಥ ಯಾವುದೇ ಅನುಭವವಿರುವುದು ಶಕ್ಯವಿರಲಿಲ್ಲ.

ಆಗ (1968) ನಾನು ಬೆಂಗಳೂರು ಸರ್ಕಾರೀ ಕಾಲೇಜಿನಲ್ಲಿ ಕೆಲಸಮಾಡುತ್ತಿದ್ದೆ. ಎದುರೇ ಇದ್ದ ಸೆಂಟ್ರಲ್ ಕಾಲೇಜ್ ಆವರಣಕ್ಕೆ ರಸ್ತೆದಾಟಿ ಹೋದೆ. ತುಸು ಅಳುಕಿನಿಂದ ಗ್ರಂಥಾಲಯ ಪ್ರವೇಶಿಸಿದೆ. ಗ್ರಂಥಪಾಲರಾದ ಗೆಳೆಯ ವಿ. ಎಸ್. ದೇಶಪಾಂಡೆ ಜೊತೆ ಅವರು ಮಾತಾಡುತ್ತ ಕುಳಿತಿದ್ದರು. ಇಬ್ಬರಿಗೂ ವಂದನೆ ಸಲ್ಲಿಸಿದೆ.

"Look, my lord, it comes!" ಎಂದರು ದೇಶಪಾಂಡೆ.

"Do I look like a ghost?" ನಾನು ದನಿಗೂಡಿಸಿದೆ.

"No! You are the angel we ~~are~~ have been longing to meet" ಎಂದರು ದೇಜಗೌ.

ಅಲ್ಲಿಂದ ಅವರು ನನ್ನನ್ನು ಹೊರಗೆ ಕರೆದೊಯ್ದು ಸಾಲು ಮರಗಳ ತಣ್ಣನೆರಳಿನಲ್ಲಿ ನಿಂತು ತಾವು ಬಂದಿದ್ದ ಉದ್ದೇಶ ವಿವರಿಸಿದರು:

ಕನ್ನಡ ವಿಶ್ವಕೋಶ ಯೋಜನೆಯನ್ನು ಸರ್ಕಾರದ ಪರವಾಗಿ ಪೂರೈಸಿಕೊಡಲು ಮೈಸೂರು ವಿಶ್ವವಿದ್ಯಾನಿಲಯ ಒಪ್ಪಿಕೊಂಡಿದೆ. ಇದೊಂದು ಪಂಥಾಹ್ವಾನ, ಕನ್ನಡದ ಕೆಲಸ, ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಸಾಹಸ. ಈ ಯೋಜನೆಯಲ್ಲಿ ವಿಜ್ಞಾನಸಂಪಾದಕನಾಗಿ ದುಡಿಯಲು ನಾನು ಬರಬೇಕೆಂದು ಅವರು ಮುಕ್ತ ಆಹ್ವಾನ ನೀಡಿದರು. ಅವರ ಮಾನವೀಯ ಕಳಕಳಿ ಮತ್ತು ಪಾರದರ್ಶಕತೆ ಅತ್ಯಂತ ಸಂಮೋಹಕವಾಗಿದ್ದುವು. "ಈ ವ್ಯಕ್ತಿಗೆ ನೀವು ಇಲ್ಲ ಎನ್ನಲಾರಿರಿ" ಎನ್ನುವ ಆತ್ಮೀಯತೆ ಮತ್ತು ಪ್ರಾಮಾಣಿಕತೆ.

ನಾನು ಮೂರು ಮುಖ್ಯ ಸಮಸ್ಯೆಗಳನ್ನು ಅಷ್ಟೇ ನೇರವಾಗಿ ವಿವರಿಸಿದೆ:

ಮೊದಲನೆಯದು ಅರ್ಹತೆ. ನಾನು ಕೇವಲ ಗಣಿತಾಧ್ಯಾಪಕ. ಸಂಪಾದನಾನುಭವ ಶೂನ್ಯ. ವಿಶ್ವಕೋಶದಂಥ ಮಹಾಯೋಜನೆಯಲ್ಲಿ ವಿಜ್ಞಾನಸಂಪಾದಕನ ವ್ಯಾಪಕ ಮತ್ತು ಗುರುತರ ಹೊಣೆ ನಿಭಾಯಿಸಲು ಸಮರ್ಥನಾಗಬಲ್ಲೆನೇ?

ಎರಡನೆಯದು ಸರ್ಕಾರೀ ನಿಯಮಗಳು. ಒಂದು ಪಕ್ಷ ಈ ಸವಾಲನ್ನು ನಾನು ಸ್ವೀಕರಿಸಿದ್ದೇ ಆದರೆ ಸರ್ಕಾರೀ ನೌಕರನಾದ ನನ್ನ ವರ್ಗಾವಣೆ ಕುರಿತಂತೆ ಎದುರಿಸಬೇಕಾಗುವ ಕಡತ ~~ಯುದ್ಧ~~ ಕಾಳಗ ನನಗೆ ಪ್ರಕೃತಿ ಒಗ್ಗದ ಕೆಲಸ. ಯಾವ ಗುಮಾಸ್ತನನ್ನು ಅಧಿಕಾರಿಯನ್ನು ನಾನಂತೂ ಇದಕ್ಕಾಗಿ ನೋಡಲಾರೆ.

ಮೂರನೆಯದು ನೀತಿಯ ಪ್ರಶ್ನೆ. ಆ ಮೊದಲೇ ನಾನು ಬೆಂಗಳೂರು

ವಿಶ್ವವಿದ್ಯಾಲಯದ ಗಣಿತ ಮುಖ್ಯಸ್ಥರ ಅಪೇಕ್ಷೆ ಮೇರೆಗೆ ಅಲ್ಲಿ ಗಣಿತ ಲೆಕ್ಚರರ್ ಆಗಿ ಸೇರಲು ಅರ್ಜಿ ಸಲ್ಲಿಸಿದ್ದೆ. ಇವರ ಜೊತೆಗೆ ಕುಲಪತಿ ಮತ್ತು ಕುಲಸಚಿವರು ಕೂಡ ನನ್ನ ಸೇವೆ ಬಯಸಿದ್ದರಿಂದ ಈ ಆಯ್ಕೆ ಕೇವಲ ಔಪಚಾರಿಕ ವಿಧಿ. ಹೀಗಿರುವಾಗ ನಾನು ಬೇರೆ ಉದ್ಯೋಗ ಹೋದದ್ದಾದರೆ ಅವರಿಗೆ ಕೊಟ್ಟ ಮಾತು ಮುರಿದಂತಾಗುವುದಿಲ್ಲವೇ?

ಇವು ಸಮಸ್ಯೆಗಳೆಂದೇ ಅವರಿಗೆ ಅನ್ನಿಸಲಿಲ್ಲ. "ನಿಮ್ಮ ಸಾಮರ್ಥ್ಯದ ಪ್ರಶ್ನೆ ನನಗೆ ಬಿಡಿ. ಸರ್ಕಾರೀ ನಿಯಮಾವಳಿ ಭೇದನೆಯೇ? ನಿಮ್ಮಿಂದ ಅಂತ ಸಮ್ಮತಿ ದೊರೆತರೆ ಉಳಿದೆಲ್ಲವನ್ನು ನಾವು ನಿರ್ವಹಿಸುತ್ತೇವೆ. ಇನ್ನು ಸೇವಾ ವಿಚಾರ. ಅದನ್ನ ನೀವೇ ಬಗೆಹರಿಸಬೇಕು: ಒಂದು ಕನ್ನಡದ ಸಾಮಾನ್ಯ ಹೊಣೆಯುಕ್ತ ಕರ್ತವ್ಯ, ನೀವು ಮಾತ್ರ ನಿರ್ವಹಿಸಬಹುದಾದ ವಿಶಿಷ್ಟ ಕೆಲಸ; ಇನ್ನೊಂದು ಗಣಿತದ ಸಂಶೋಧನೆಯುಕ್ತ ಕಾರ್ಯ, ಪದವೀಧರರು ಯಾರೂ ನಿರ್ವಹಿಸಬಹುದಾದ ಸಾಧಾರಣ ಕೆಲಸ. ಕನ್ನಡದ ಈ ಕೆಲಸಕ್ಕೆ ನೀವೇ ಬರಬೇಕೆಂಬುದು ನಮ್ಮ ಆಶಯ."

ಈ ವ್ಯಕ್ತಿಗೆ ನೇರವಾಗಿ ನೀವು ಇಲ್ಲ ಎನ್ನಲಾರಿರಿ. ನನ್ನಲ್ಲಿ ಇಲ್ಲದ ಗುಣವನ್ನ ಅವರ ಔದಾರ್ಯದ ಸೂಕ್ಷ್ಮದರ್ಶಕ ಬಳಸಿ ಬಿಂಬಿಸುತ್ತದೆ. ಅಳುಕಿನ ಹೃದಯಕ್ಕೆ ಭರವಸೆಯ ಜೀವದ್ರವ್ಯ ತುಂಬುತ್ತದೆ. ಜೊತೆಗೆ ಕನ್ನಡದ ಕೆಲಸ ಎಂಬ ಅಭಿಮಾನ ಅಮೃತವನ್ನು ಊಡುತ್ತದೆ.

"ಒಂದು ವಾರ ಕಾಲಾವಕಾಶ ಕೊಡಿ. ಯೋಚಿಸಿ ಬರೆಯುತ್ತೇನೆ" ಎಂದೆ.

"ಒಪ್ಪಿಗೆ ಬಂದಿತೆಂದು ನಿರೀಕ್ಷಿಸಲೇ!"

ಹಿರಿಯರು, ವಿದ್ವಾಂಸರು, ವಿಶ್ವಕೋಶದ ಗೌರವ ಸಲಹಾ ಸಮಿತಿಯ ಅಧ್ಯಕ್ಷರು ಮತ್ತು ನನ್ನ ಹಿತೈಷಿಗಳು ಆದ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ಯರು ಸ್ಪಷ್ಟವಾಗಿ ಹೇಳಿದರು "ಎರವಲು ಸೇವೆ ಮೇರೆಗೆ ಹೋಗಿ. ಪ್ರಯೋಗಕ್ಕೆ ಪ್ರಯತ್ನ ಮಾಡಿ. ಖಂಡಿತ ಯಶಸ್ಸು ಗಳಿಸುತ್ತೀರಿ."

ಗಣಿತ ಮುಖ್ಯಸ್ಥರು ಮಾತ್ರ ಇನ್ನು ಕೆಲವೇ ತಿಂಗಳುಗಳಲ್ಲಿ ಔಪಚಾರಿಕ ಆಯ್ಕೆ ಪ್ರಕ್ರಿಯೆ ನಡೆದು ನಾನು ಅವರ ಬಳಗ ಸೇರುವುದು ಖಾತ್ರಿಯಾದ್ದರಿಂದ ವಿಶ್ವಕೋಶಕ್ಕೆ ಹೋಗುವುದು ಬೇಡವೆಂದು ಸೂಚಿಸಿದರು. ಅಲ್ಲದೆ ~~[illegible]~~ ವಿಶ್ವವಿದ್ಯಾನಿಲಯದ ಪ್ರತಿಷ್ಠೆಯಲ್ಲಿ ನಾನು ಸಹಭಾಗಿಯಾಗಬೇಕೆಂಬ ಇಚ್ಛೆಯನ್ನು ಕೂಡ ಹೇಳಿದರು.

ಮುಂದಿನ ವಾರ ನಾನು ನೇರಾಗಿ ಅವರಿಗೆ ಬರೆದ ಜವಾಬು ಆತ್ಮೀಯ ಪತ್ರದಲ್ಲಿ ನೀತಿ ಪ್ರಶ್ನೆಯನ್ನು ಎತ್ತಿ ಹಿಡಿದು ಅವರ ಪ್ರೀತಿಯ ಆಹ್ವಾನ ಅಂಗೀಕರಿಸಲು ಸಾಧ್ಯವಾಗದಿದ್ದುದಕ್ಕೆ ವಿಷಾದ ವ್ಯಕ್ತಪಡಿಸಿದೆ.

ಹಲವು ತಿಂಗಳು ಸಂದವು. ಬೆಂಗಳೂರು ವಿಶ್ವವಿದ್ಯಾಲಯದ ಆಯ್ಕೆ ಸಮಿತಿ ಮುಂದೆ ~~ನಾನು~~ ಹಾಜರಾದೆ. ಗಣಿತ ಮುಖ್ಯಸ್ಥರು ಖುದ್ದು ತಾವೇ ನನ್ನ ಪರವಾಗಿ ಸಮಿತಿ ಮುಂದೆ ಉತ್ಪ್ರೇಕ್ಷಿತ ಚಿತ್ರ ಬಿತ್ತರಿಸಿದರು. ಕುಲಪತಿ ಮತ್ತು ಕುಲಸಚಿವ ಇಬ್ಬರಿಗೂ ಪರಮ ಸಂತೋಷವಾಯಿತು. ~~ನಾನು~~ ಸಹಜವಾಗಿ ಹೊರನಡೆದೆ.

ಅವರೆ ಆ ಸಂಜೆ ಕುಲಸಚಿವರು ತುರ್ತಾಗಿ ನನಗೆ ಹೇಳಿ ಕಳಿಸಿದರು "ನಿಮ್ಮ ಪ್ರೊಫೆಸರ್ ಕೈಕೊಟ್ಟಿದ್ದಾರೆ. ಅವರು ಬೇರೆ ಅಭ್ಯರ್ಥಿಯನ್ನು ಆಯ್ದು ತಮ್ಮ ಹಟ ಸಾಧಿಸಿದ್ದಾರೆ. ನಾವೇನೂ ಮಾಡುವಂತಿಲ್ಲ. ನೀವೇ ಅವರಿಗೆ ಹೋಗಿ ಹೇಳಿ—

③

ಇನ್ನೊಂದು ಗಣಿತ ಶಿಕ್ಷಕರ ಹುದ್ದೆಯನ್ನು ಸೇರಿ ಬರೆಯುವಂತೆ. ಅದನ್ನು ಕೂಡಲೆ ಮಂಜೂರು ಮಾಡುತ್ತೇವೆ ಮತ್ತು ನಿಮ್ಮನ್ನು ಅದಕ್ಕೆ ನೇಮಕ ಮಾಡುತ್ತೇವೆ."

ಗಣಿತಜ್ಞ ವ್ಯಕ್ತಿ ಇಷ್ಟಕ್ಕೆ ನೀತಿ ಬಗ್ಗೆ ನನಗೆ ಮಾತ್ರ ಕೋಪ ಬಂತು. ನಾನು ಅವರನ್ನು ನೋಡಲು ಹೋಗಲಿಲ್ಲ. ಆದರೆ ಅವರೇ ಹೇಳಿಕಳಿಸಿದರು "ನಿಮ್ಮ ಭವಿಷ್ಯದ ಅಭಿವೃದ್ಧಿಯಿಂದ ಈ ಹುದ್ದೆಗೆ ನಿಮ್ಮನ್ನು ಆಯುವುದು ಉಚಿತವೆಂದು ನಾನು ಭಾವಿಸಿದೆ. ಇಲ್ಲಿಯ ಪ್ರಾಥಮಿಕದ ನಿರ್ದೇಶಕರಾಗಿ ನೀವು ಬರಬೇಕು — ಇದು ಉಪನ್ಯಾಸಕರ ಸಮಾನವಾದ ಹುದ್ದೆ."

"ನನ್ನ ಭವಿಷ್ಯ ನಿರ್ಣಯಿಸುವವನು ನಾನು — ನೀವಲ್ಲ. ನಾನು ಶಿಕ್ಷಕರ ಹುದ್ದೆಗೆ ಅರ್ಜಿ ಹಾಕಿಯೂ ಯೋಚನೆ ಮಾಡಿ ಬಂದಿದ್ದಾಗ ನೀವೇ ಉತ್ತರಿಸಿ ಅರ್ಜಿ ಹಾಕಿಸಿದಿರಿ. ಈಗ ಹೀಗೆ ಹೇಳುತ್ತೀರಿ. ನಿಮ್ಮ ನೀತಿ ಮೌಲ್ಯದ ಬಗ್ಗೆ ನನಗೆ ವ್ಯಥೆ ಆಗುತ್ತದೆ."

ತತ್‌ಕ್ಷಣವೇ ನಾನು ಡೀನ್ ಅವರಿಗೆ ಒಂದು ಖಾಸಗಿ ~~ಪತ್ರ~~ ಕಾಗದ ಬರೆದೆ: ನೀತಿ ಪ್ರಶ್ನೆ ಬಗೆಹರಿದಿದೆ; ಅವರ ಆಹ್ವಾನ ~~ಕಾ~~ಗಳು (ನನ್ನ ಹಿಂದಿನ ವಿನಾಯಕ ~~ಕಾಗದ~~ ಪತ್ರ ಬರೆದು ಅರ್ಧ ವರ್ಷವೇ ಸಂದಿತ್ತು) ಸಿಂಧುವಾಗಿದ್ದರೆ ನಾನು ಅದನ್ನು ಸ್ವೀಕರಿಸಲು ಸಿದ್ಧ. ವಿವರ ಬರೆಯಲಿಲ್ಲ. 'ಮರುಟಪ್ಪಾಲಿಗೆ' ಎಂಬಂತೆ ನನ್ನ ನಿರೀಕ್ಷೆಯಂತೆ ಗೆಳೆಯ ಕು. ಶಿ. ಹರಿದಾಸಭಟ್ಟರು ಮೈಸೂರಿನಿಂದ ಡೀನ್ ~~ಅವರ~~ ಸಂದೇಶ ಹೊತ್ತು ಬಂದಿದ್ದರು: ಆ ಹುದ್ದೆ ಇನ್ನು ಖಾಲಿಯಾಗಿ ಉಳಿದಿತ್ತು.

ಮುಂದಿನ ವಾರ ಡೀನ್ ಬೆಂಗಳೂರಿಗೆ ಬಂದಾಗ "ಕನ್ನಡದ ಕೆಲಸ ಇನ್ನು ಆರಂಭ ಆಗುತ್ತದೆ, ಸಂದೇಹವಿಲ್ಲ" ಎಂದರು.

1969 ಜೂನ್ ತಿಂಗಳಿನಲ್ಲಿ ನಾನು ವಿಶ್ವಕೋಶದ ವಿಜ್ಞಾನ ಸಂಪಾದಕನಾಗಿ ಸೇರಿದೆ. ಕಾರ್ಯಸ್ಥಳ: ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು. ಇದರ ನಿರ್ದೇಶಕರಾದ ಡೀನ್ ಅವರೇ ವಿಶ್ವಕೋಶದ ಪದನಿಮಿತ್ತ ಗೌರವ ಪ್ರಧಾನ ಸಂಪಾದಕರು ಕೂಡ. ಪ್ರಾರಂಭದ ಸಂಪಾದಕವರ್ಗದಲ್ಲಿ ನನ್ನನ್ನು ಒಳಗೊಂಡಂತೆ ನಾಲ್ವರು ಸಂಪಾದಕರು ಮತ್ತು ಹಲವಾರು ಸಹಾಯಕ ಸಂಪಾದಕರು ಇದ್ದರು.

ಆ ಒಂದು ದಿನ ಡೀನ್ ನನಗೆ ಹೇಳಿದ ಮಾತಿನ ಸಾರವಿದು "ಸರ್ಕಾರದ ಶಿಕ್ಷಣ ಇಲಾಖೆಯ ಒಂದು ಉಪವಿಭಾಗವಾಗಿ ವಿಶ್ವಕೋಶ ಯೋಜನೆ ಕಾರ್ಯನಿರ್ವಹಣ ನಿಯಮಾನುಸಾರ ಹತ್ತು ವರ್ಷ ಕಾಲ ಬೆಳೆದು ಅಭಿವರ್ಧಿಸಿತು: ಸಿಬ್ಬಂದಿ, ಕಚೇರಿ, ಕೆಂಪುಪಟ್ಟಿ, ವೆಚ್ಚ ಎಲ್ಲ ಕ್ರಮಶಃ ವರ್ಧಿಸಿದುವು, ಆದರೆ ಸಂಪುಟ ಮುದ್ರಣ ಆಗಲಿಲ್ಲ. ನಮಗೆ ನೀವು ಈ ಯೋಜನೆ ವಹಿಸಿಕೊಟ್ಟರೆ ಕೇವಲ ಎರಡೇ ವರ್ಷಗಳಲ್ಲಿ ~~ಮೊದಲ~~ ಒಂದನೆಯ ಸಂಪುಟ ಪ್ರಕಟಿಸಿ ಕೊಡುತ್ತೇವೆ ಎಂದು ಸರ್ಕಾರಕ್ಕೆ ಆಶ್ವಾಸನೆ ನೀಡಿ ಈ ಕೆಲಸವನ್ನು ಸ್ವೀಕರಿಸಿದ್ದೇವೆ. ಈಗ ಒಂದು ವರ್ಷ ಸಂದಿದೆ. 1970 ಜೂನ್ ಹೊತ್ತಿಗೆ ~~ಮೊದಲ~~ ಒಂದನೆಯ ಸಂಪುಟ ಪ್ರಕಟವಾಗಬೇಕು. ಇದು ವಿಶ್ವವಿದ್ಯಾನಿಲಯದ ಮರ್ಯಾದೆ ಪ್ರಶ್ನೆ, ಕನ್ನಡದ ಹಿರಿಮೆ ಪ್ರಶ್ನೆ, ನಮ್ಮೆಲ್ಲರ ಸಾಮೂಹಿಕ ಬಲದ ಪ್ರಶ್ನೆ. ಕನ್ನಡದ ಈ ಹಿರಿಯನಾದ ಎದುರು ಯಾವ ಎಡರು ತೊಡರೂ ಅಡ್ಡ ಬಾರದಂತೆ ನೋಡಿಕೊಳ್ಳುವುದು ನಿಮ್ಮೆಲ್ಲರ ಯೋಗಕ್ಷೇಮ ಕಾಪಾಡುವುದು ನನ್ನ ಹೊಣೆ. ಕೆಲಸ ಮುಗಿಸಿ ನಾಡಿನ ಜನತೆಯ ಕೃತಜ್ಞತೆಗೆ ಪಾತ್ರರಾಗುವುದು ನಿಮ್ಮ ಹೊಣೆ."

ಆ ವೇಳೆಗೆ ವಿಶ್ವಕೋಶ ಕಾರ್ಯಾಲಯ ಯುದ್ಧರಂಗಸದೃಶ ತೀವ್ರತೆಯಿಂದಲೂ ದಕ್ಷತೆಯಿಂದಲೂ ಕಾರ್ಯೋನ್ಮುಖವಾಗಿತ್ತು. ~~ಮೊದಲ~~ ಒಂದನೆಯ ಸಂಪುಟದ

ಮೊದಲ ಕೆಲವು ಘಳಿಗೆಗಳು ಮುದ್ರಾರಹಂತ ತಲುಪುತ್ತಿದ್ದುವು. ಇಲ್ಲಿ ನನ್ನ ಪಾತ್ರ ಏನು? ಓಘಕ್ಕೆ ಪೂರ್ತಿ ದುಮುಕಿ ಇದರ ಕಾರ್ಯವಿಧಾನ ಅರಿಯುವುದು ಮತ್ತು ತದನುಗುಣವಾಗಿ ನನ್ನ ಕಾರ್ಯಕ್ರಮ ~~ರೂಪಿಸಿಕೊಳ್ಳುವುದು~~ ರೂಪಿಸುವುದು — ಉಪಾಧ್ಯಾಯನಾಗಿಯೂ ಸೃಜನಶೀಲ ಲೇಖಕನ ದಿವ್ಯ ಉನ್ಮಾದ ಮತ್ತು ಕಾರ್ಯಸ್ವಾತಂತ್ರ್ಯವನ್ನು ಸಂಪಾದಕನಾಗಿಯೂ ಶಾಸ್ತ್ರಬದ್ಧ ಲೇಖಕನ ವೈಚಾರಿಕ ಶಿಸ್ತು ಮತ್ತು ಸಮಯಾನುಬಂಧಿತ ಕ್ರಿಯೆಯಾಗಿ ರೂಪಾಂತರಿಸುವುದು ಸುಲಭಸಾಧ್ಯವೇನೂ ಆಗಿರಲಿಲ್ಲ. ಕನ್ನಡದ ನೆಲದಲ್ಲಿ ಹೊಸ ದಾಖಲೆ ಸ್ಥಾಪಿಸುವ ಈ ಪವಿತ್ರ ಯಜ್ಞದಲ್ಲಿ ಅವರು ದ್ರಷ್ಟಾರರಾಗಿದ್ದರು, ನಾವು ಹೋತಾರರಾಗಿದ್ದೆವು. ಉತ್ಸಾಹದ ಸಂವೇಗ ಸರ್ವಂಕಷವಾಗಿತ್ತು. ಹಾಗೆ ಸಾಗಿತು!

ಚಂದ್ರನ ಮೇಲೆ ಅದೇ ತಾನೇ ಮಾನವ ಮೊದಲ ಬಾರಿಗೆ ಇಳಿದು "ಇದೊಂದು ವ್ಯಕ್ತಿಗೆ ಬಲು ಪುಟ್ಟ ಹೆಜ್ಜೆ ಆದರೆ ಮಾನವ ಜನಾಂಗಕ್ಕೆ ಹನುಮಂತ ನೆಗೆತ" ಎಂದು ಉದ್ಗರಿಸಿದ್ದ (21.7.1969). ಈ ರೋಮಾಂಚಕರ ಸಾಹಸಗಾಥೆಯನ್ನು ಚಿತ್ರ ಸಾಕ್ಷ್ಯಾಧಾರ ಸಹಿತ ನಾವು ನಿರೂಪಿಸಿದಾಗ ದೇಜಗೌ ಸ್ವತಃ ತಾವೇ ಚಂದ್ರನ ಮೇಲೆ ಇಳಿದು ಹಿಂತಿರುಗಿದಷ್ಟು ಉತ್ತೇಜಿತರಾದರು. ಒಂದನೆಯ ಸಂಪುಟದ ಮುನ್ನುಡಿಯಲ್ಲಿ ಅವರು ಬರೆದಿರುವ ಮಾತ~~ನ್ನು ಇಲ್ಲಿ ಉಲ್ಲೇಖಿಸಬಯಸುವೆ~~ "ಚಂದ್ರಯಾನ ವರೆಗೆ ಸಂಬಂಧಿಸಿದ ವಿವರಗಳನ್ನು ನಮ್ಮ ಈ ಮೊದಲ ಸಂಪುಟ ಒಳಗೊಂಡಿರುವುದು ನಮ್ಮ ಸಂಪಾದಕವರ್ಗದ ಶ್ರದ್ಧೆ, ನಿಷ್ಠೆ ಮತ್ತು ವಿಚಾರಪರತೆಗೆ ಸಾಕ್ಷಿಯಾಗಿದೆ. ಹೀಗಾದುದರಿಂದಲೇ ನಮ್ಮ ಕನ್ನಡ ವಿಶ್ವಕೋಶ ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ, ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ ಅತ್ಯಂತ ಉಪಯುಕ್ತವಾಗುವುದು, ಉಪಾದೇಯವಾಗುವುದು."

ಭೌತವಿಜ್ಞಾನದ ಒಂದು ಸುದೀರ್ಘ ಲೇಖನವನ್ನು ಸಂಪಾದನೆಗೆ ಎತ್ತಿಕೊಂಡೆ. ಸುಮಾರು 25 ಪುಟ ಅತಿ ಸಣ್ಣ ಅಕ್ಷರದಲ್ಲಿದ್ದ ಅದು ವಿಶ್ವಕೋಶದ ವ್ಯಕ್ತಿತ್ವಕ್ಕೆ ಸುತರಾಂ ಹೊಂದುವಂತಿರಲಿಲ್ಲ; ಏಕೆ, ಪ್ರಾಯೋಗಿಕ ಪಠ್ಯಪುಸ್ತಕವಾಗಬಹುದಾಗಿತ್ತು ಅಷ್ಟೆ. ಅದನ್ನು 1960ರ ಅಂದಾಜಿಗೆ ಬರೆದಿದ್ದರು 1945ರಿಂದ ಈಚೆಗೆ ಆ ಕ್ಷೇತ್ರದಲ್ಲಿ ಆಗಿದ್ದ ಅಭಿವರ್ಧನೆಗಳ ಬಗ್ಗೆ ಅದರಲ್ಲಿ ಯಾವ ಮಾಹಿತಿಯೂ ಇರಲಿಲ್ಲ. ಇನ್ನು ಅದರ ಲೇಖಕರು? ತತ್ಪೂರ್ವ ಭೌತವಿಜ್ಞಾನಿಗಳ ಸಮಯ ಅಭ್ಯಾಸ ಮಾಡಿದ್ದ ನಾಡಿನ ಗಣ್ಯ ಭೌತವಿಜ್ಞಾನ ಪ್ರಾಧ್ಯಾಪಕರು. ಭೌತವಿಜ್ಞಾನದ ನನ್ನ ನಾನು ಇದನ್ನು ಸಂಪಾದಿಸಿ ಅವರ ಪ್ರಹಾರದಿಂದ ಬಚಾವಾಗುವುದು ಹೇಗೆ? ಪಾಕತ್ವನ ತಾಗದಿಂದ ಸಂಪಾದಿಸಿ ಪುನರ್ವಿರಚಿಸಬಲ್ಲ ಸಾಮರ್ಥ್ಯ ನನಗಿರಲಿಲ್ಲ. ಹಾಗೆಂದು ತದ್ವತ್ತಾಗಿ ಪ್ರಕಟಿಸುವುದು ~~ಇಷ್ಟವೂ ಇರಲಿಲ್ಲ~~ ಉಚಿತವೆನಿಸಲಿಲ್ಲ.

ನನ್ನ ಸಂದಿಗ್ಧತೆಯನ್ನು ಪ್ರಧಾನ ಸಂಪಾದಕರಿಗೆ ವಿವರಿಸಿದೆ. ಇದರ ಪೂರ್ಣ ಮುನ್ನರಿವಿದ್ದ ಅವರು, ~~ನನ್ನ~~ ನಾನು ಗಂಗೋತ್ರಿಯ ಭೌತವಿಜ್ಞಾನ ಮುಖ್ಯಸ್ಥರನ್ನು ~~ಜೊತೆಗೆ~~ ಕಂಡು ಯೋಗ್ಯ ಮಾರ್ಗದರ್ಶನ ~~ಪಡೆಯಲು~~ ಪಡೆಯುವಂತೆ ಸೂಚಿಸಿದರು. ಕನ್ನಡ ಬಲ್ಲದ ಇವರು ಕನ್ನಡಬಲ್ಲ ತಮ್ಮ ಹಿರಿಯ ಸಹೋದ್ಯೋಗಿಯನ್ನು ಜೊತೆಗೆ ಬರಮಾಡಿಕೊಂಡರು.

ನಾವು ಮೂವರೂ ಸಮಸ್ಯೆಯನ್ನು ಪರ್ಯಾಲೋಚಿಸಿದೆವು. ನಾನು ಎತ್ತಿದ ಬಾಧಕ ಅಭ್ಯಂತರಗಳನ್ನು ಅವರು ಒಪ್ಪಿದರಾದರೂ ಲೇಖಕರ ಸ್ಥಾನಮಾನ ಸ್ವಭಾವ ಅರಿತವರಾಗಿದ್ದುದರಿಂದ ಅವರ ತಂಟೆಗೆ ಹೋಗಲು ಹಿಂಜರಿದರು. ಹೀಗಾಗಿ ಒಂದು ಒಡಂಬಡಿಕೆಗೆ ಬಂದೆವು: ಲೇಖನವನ್ನು ನಾನು ನನಗೆ ತೋಚಿದಂತೆ ಸಂ

⑤
ಸ್ಥಾಪಿಸಿ ಆಧುನೀಕರಿಸಿ ಸಂಪಾದಿಸಬೇಕು; ತರುವಾಯ ಇದನ್ನು ಇಡೀ ಪುನಃ ಕೂಲಂಕಷವಾಗಿ ಪರಿಶೀಲಿಸಿ ಇದರಲ್ಲಿಯೂ ಲೋಪದೋಷಗಳನ್ನು ನಿವಾರಿಸಿ ಪರಿಷ್ಕರಿಸಬೇಕು; ಇವರ ಸಲಹೆ ಸಹಕಾರ ಪೂರ್ತಿ ನೆರವು ಅಗತ್ಯವೆಂದು ಪರಿಗಣಿಸಲ್ಪಡಬೇಕು. ಪ್ರಧಾನ ಸಂಪಾದಕರು ಈ ವಾದವನ್ನು ಒಪ್ಪಿ “ನೈತಿಕವಾಗಿ ನಿಮ್ಮ ಶುದ್ಧವಾಗಿದೆ. ಕಾನೂನಿನ ಬೇಡಿಕೆಯನ್ನು ನಾನು ಪೂರೈಸುತ್ತೇನೆ” ಎಂದು ಒಪ್ಪಿಸಿದರು. ಸಮಸ್ಯೆಯ ಭಾರ ಹಗುರಾಗಿ ತೋರಿತು.

